Reg. No. M. 1550

KODAGU

10—4—1936

IF NOT delivered please return to "KODAGU" OFFICE, MERCARA.

ಕೊಡಗು

ಅಚ್ಚುಮೆಚ್ಚಿನ ಮುದ್ರಣ ಕೆಲಸಕ್ಕೆ "ಕೊಡಗು" ಪ್ರೆಸ್ಸು ಮಡಿಕೇರಿ.

ಹೆಚ್ಚಿನ ವಿಷಯಕ್ಕೆ ಕೂಡಲೆ ವಿಚಾರಿಸಿರಿ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಸಂಪುಟ ೧೫] ಮಡಿಕೇರಿ, ತಾ. ೧೦—೪—೧೯೩೬ [ಸಂಚಿಕೆ ೪೦,

Telephone; 3145

By Appointment To H. E The Governor of Madras.

Telegrams: 'PRECIOUS.'

Brooch



Necklace.

Ring.

Ring.

V. SUBRAMANIA IYER.

Jeweller, & Diamond Merchant,

52—20 2 & 3 Kuppumuthu Street Tiruvateswaranpet. POST B X 423 TRIPLICANE. P. O., MADRAS.

Catalogue & special designs with quotations (free) on enquiry

BANKING FACILITIES OF EVERY DESCRIPTION.

Head office:—UDIPI.

BRANCHES:—

1. Madras,
2. Coondapoor.
3. Car Street, Mangalore.
4. Bunder, Mangalore.
5. Shimoga.
6. Udipi
7. Mercara.
8. Virarajendrapet

Security.

The financial strength and integrity of this Bank is shown by the growth of the RESERVES from a modest sum of Rs. 83000 in 1927 to its present position with Rs. 3,64,644.

BANKERS AT—

1. Bombay.
2. Calcutta.
3. Karachi.
4. Bangalore.
5. Mysore.
6. Calicut.
7. Cannanore.
8. Cochin, and other important places.

To those thinking of investments the following figures should strongly appeal.

Capital: Anthorised, issued and subscribed—Rs. 3,50,000.

Paid up Rs. 2,87,435.

Deposits—Rs. 27,99,323. Working Capital—Rs. 35,66,707.

Fixed Deposits now received upto 5%.

The Canara Banking Corporation Udipi Limited.

52—21 Estd. 1906.

ಜನರಲ್

ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್.

(ಸ್ಥಾಪಿತವಾದದ್ದು 1907 ರಲ್ಲಿ)

ಜೀವವಿಮೆಯಲ್ಲಿನ ಅತ್ಯುತ್ತಮ ಸೌಲಭ್ಯಗಳನ್ನೆಲ್ಲ ಕೊಡುತ್ತದೆ.

ಬೋನಸ್ಸು ಅತೀ ಹೆಚ್ಚು.

ಜೀವಾವಧಿ ಪಾಲಿಸಿಗಳ ಮೇಲೆ ವರ್ಷಕ್ಕೆ ರೂ. 25%೦

ಎಂಡೋಮೆಂಟ್ ಪಾಲಿಸಿಗಳ ಮೇಲೆ ವರ್ಷಕ್ಕೆ ,, 20%೦

ಪಾಲಿಸಿಯ ಶರತ್ತುಗಳು ಅತೀ ಸುಲಭ

ಅಷ್ಯೂರೆನ್ಸ್ ಯೋಜನೆಗಳು ಎಲ್ಲರಿಗೂ ಹಿತಕರವಾಗಿದೆ.

ಏಜೆನ್ಸಿ ನಿಯಮಗಳು ಅತೀ ಲಾಭದಾಯಕವಿದ್ದು ವಂಶವಾರಂಪರ್ಯ ಕಮಿಶನ್ ದೊರೆಯುವಂತಿದೆ.

ಹೆಚ್ಚಿನ ವಿವರಗಳಿಗೆ ಕೂಡಲೇ ಬರೆಯಿರಿ.

ಪಿ. ಡಿ. ಭಾರ್ಗವ, ಎಫ್. ಎಸ್. ಎಸ್. (ಲಂಡನ್),
ಜನರಲ್ ಮೇನೇಜರ್, ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್, ಅಜ್ಮೀರ್. ಅಥವಾ:—

ಎ. ಎನ್ ಎಸ್ ಅಯ್ಯಂಗಾರ್,
ಸುಪರಿಂಟೆಂಡೆಂಟ್, ಜನರಲ್ ಅಷ್ಯೂರೆನ್ಸ್, ಬಿಲ್ಡಿಂಗ್, ಚಾಮರಾಜಪೇಟೆ, ಬೆಂಗಳೂರು

52—43

"ಪೂರ್ತಿ ರಂಗಕ್ಕಿಳಿಯಬೇಕು"

ಪ. ತಾರಾನಾಥರ ವಿಚಾರಪರ ನುಡಿ.



[ತಾ. 29—3—36ನೇ ದಿವಸ ಕೆಲವು ವಿದ್ಯಾರ್ಥಿಗಳು ದೇಶ ಸೇವೆಯು ಉತ್ತಮ ಹಾದಿಯೂವದು ಎಂಬುದನ್ನು ಕೇಳಿದ್ದಕ್ಕೆ ಪಂಡಿತ ತಾರಾನಾಥರು 'ಪೂರ್ತಿರಂಗಕ್ಕಿಳಿಯಬೇಕು' ಎಂಬ ವಿಷಯವಾಗಿ ಮಾತನಾಡಿದರು. ಅವರು ಹೇಳಿದ್ದರ ಸಾರಾಂಶ]

ಯಾವ ಭಾಷಣವನ್ನೇ ಆಗಲಿ ಹೇಳಿದ ಮಾತ್ರಕ್ಕೆ ತಮಗೆ ತಿಳಿಯಿತು ಎಂದರೆ ಅವರಿಗೆ ಆ ವಿಷಯದ ಸಾಕಷ್ಟು ಜ್ಞಾನವಾಗಿದೆ ಎಂದಾಗುವದಿಲ್ಲ. ಅದರೊಳಗಿನ ಒಂದೆರಡು ಶಬ್ದಗಳು ಹಲವು ಸಾರೆ ಕೇಳಿ ಕೇಳಿ ಅವರಿಗೆ ಬಂದಿರುವದರಿಂದ ಅವೇ ಶಬ್ದಗಳನ್ನು ಉಪಯೋಗಿಸಿಕೊಂಡು ತಮಗೆ ತಿಳಿಯಿತು ಎಂದು ಹೇಳುತ್ತಾರೆ ಅಷ್ಟೇ. ಉದಾಹರಣಾರ್ಥವಾಗಿ, ಒಂದು ಸಂಗೀತ ಕಚೇರಿಗೆ ಹೋದಾಗ ಎಷ್ಟೋ ಜನ ತಲೆತೂಗುವದನ್ನು ಕಾಣಬಹುದು ಏನು ರಾಗ, ಏನು ತಾಳ, ಭಲೆ ಎನ್ನುವವರು ಬಹುಮಂದಿ! ಇವರೆಲ್ಲರಿಗೂ ಸಂಗೀತ ಜ್ಞಾನವಿದೆಯೆಂದೋ ಇದರ ಅರ್ಥ? ತಾಳ, ರಾಗ ಎನ್ನುವ ಶಬ್ದಗಳು ಮಾತ್ರ ಅವರಿಗೆ ಗೊತ್ತು. ಅವನೆಂದು ಇವನು ಇವನೆಂದು ಅವನು, ಹೀಗೆ ಒಬ್ಬರನ್ನು ನೋಡಿ ಇನ್ನೊಬ್ಬರು ಎಲ್ಲರೂ ತಲೆತೂಗಿ ಬಿಡುತ್ತಾರೆ, ಸಂಗೀತ ತಿಳಿಯುತೆಂದಲ್ಲ.

ಯಾವದರ ತಿಳಿವಳಿಕೆಯು ಸಾಕಷ್ಟು ಆಗುವದಿಲ್ಲವೋ ಅದರ ವಿಷಯವಾಗಿ ತಪ್ಪು ತಿಳಿವಳಿಕೆ ಮಾತ್ರ ಆಗುವದು ಖಂಡಿತವೆನ್ನುವದು ನಿಜವಾದ ಮಾತು.

ಕಲೆ, ಸಾಹಿತ್ಯ, ವೇದಾಂತ ಇತ್ಯಾದಿ ವಿಷಯಗಳನ್ನು ಕುರಿತು ಎಷ್ಟು ಜನರು ವ್ಯಾಖ್ಯಾನಗಳನ್ನು, ಎಷ್ಟು ಜನರು ಲೇಖನಗಳನ್ನು ಕೊಡುವದಿಲ್ಲ, ಆದರೆ ಅವರೆಲ್ಲರೂ ಅದರಲ್ಲಿ ಪಾರಂಗತರು ಎನ್ನುವದು ಸಂದೇಹಾಸ್ಪದವೇ. ಈ ವಿಷಯಕ್ಕೆ ಸಂಬಂಧಪಟ್ಟ ಕೆಲವು ಶಬ್ದಗಳು ಮಾತ್ರ ತಿಳಿದಿದ್ದರೆ ಸಾಕು, ಅವುಗಳಿಂದ ಮಾತಿನ ಮೂಲೆಯನ್ನು ಕಟ್ಟಿ ಜನರ ಕೂರಳಿಗೆ ಹಾಕಿ ಭಾವು ಎನ್ನಿಸಿಕೊಳ್ಳಬಹುದು. ಅಂಥವರಿಗೆ ಇರುವದು ಜ್ಞಾನವಲ್ಲ, ಜ್ಞಾನಾಭಿಲಾಷೆಯೂ ಅಲ್ಲ; ಬರೀ ಹೆಮ್ಮೆ.

ಇದಕ್ಕೇ ಏನನ್ನು ಹೇಳುವದೇ ಆಗಲಿ ನಾವು ಹೇಳುವಾಗ ಜಾಗರೂಕರಾಗ್ಬೇಕು. ನಾವು ಹೇಳುವದು ನಮ್ಮ ಸತ್ಯಾನುಭವಕ್ಕೆ ಹೊಂದಿಕೊಂಡಿರುವದಾಗಿರಬೇಕು.

ಸತ್ಯಾನುಭವ ಎಂದರೇನು? ಸ್ವಪ್ನವು ಸತ್ಯಾನುಭವವಲ್ಲ. ಯಾಕೆಂದರೆ ಇಬ್ಬರು ಒಂದೇ ವಿಧವಾದ ಸ್ವಪ್ನವನ್ನು ಕಾಣಲಾರರು. ಕನಿಷ್ಟಪಕ್ಷಕ್ಕೆ ಇಬ್ಬರಾದರೂ ಒಂದೇಯೂಗಿ ತಿಳಿದು ಬರುವ ಸಂಗತಿಯೇ ಸತ್ಯಾನುಭವ. ಅವರ ವಿಚಾರ ಒರಗಲ್ಲಿಗೆ ತಿಕ್ಕಿದಾಗ ಅದು ಇತರರಿಗೂ ಒಂದೇಯೂಗಿ ತೋರಿಬರಬೇಕು.

ಹೀಗೆ ಸತ್ಯಾನುಭವವಿಲ್ಲದೆ ಮಾತನಾಡುವದು ಯಾರಿಗೂ ಹಿತಕಾರಿಯೂಗಲಾರದು. ಸತ್ಯಾನುಭವವನ್ನು ಪಡೆದ ವಿಷಯವಾಗಿ ಹೇಳಿದರೆ ಆ ಮಾತುಗಳಲ್ಲಿ ಅರ್ಥವಿರುವದು. ಹಾಗಲ್ಲದೆ ಹೇಳುವದೆಲ್ಲ ಅವರಿವರು ಹೇಳಿದ್ದರ ಜರ್ಜಿತ ಚರ್ವಣವೇ ಆದರೆ? 'ಯೂರಾದರೊಬ್ಬನು—ನಾನು ಆಲೋಚಿಸುತ್ತಿದ್ದೇನೆ—ಎಂದರೆ ಸಾಧಾರಣವಾಗಿ ಅವನು ಬರೀ ಪುಸ್ಕರಣೆ ಮಾಡುತ್ತಾನೆ' ಎಂದರ್ಥ—ಎಂದು ಪಾಶ್ಚಿಮಾತ್ಯ ಮೇಧಾವಿಗಳಲ್ಲೊಬ್ಬರಾದ ಬೆಂಥಮ್ ಎಂಬವರು ಹೇಳಿದ್ದಾರೆ. ಇದು ನಿಜವೇ.

ಸಾಮಾನ್ಯ ಮನುಷ್ಯನು ಯೋಚಿಸುವದಿಲ್ಲ. ಅವನಲ್ಲಿ ಶಬ್ದಗಳು ಎಣಿಕೆಯ ಗುಂಪುಗಳು. ನೂರರ ವರೆಗೆ ಎಣಿಸಲು ಬಾರದ ಹಳ್ಳಿಯ ಹೆಂಗಸು ಹತ್ತಾದ ಕೂಡಲೆ ಒಂದು ಕಲ್ಲುಗುಂಡನ್ನೋ ಇನ್ನೇನನ್ನೋ ಇಟ್ಟುಕೊಂಡು ನೂರರ ಎಣಿಕೆಯನ್ನು ಪೂರ್ತಿಮಾಡಿಕೊಳ್ಳುವಂತೆ ಸಾಮಾನ್ಯರೂ ಅಲ್ಲಲ್ಲಿ ಕೇಳಿಕೊಂಡ ಹಲ ಕೆಲವು ಶಬ್ದಗಳನ್ನು ಉಪಯೋಗಿಸಿ ಮಾತನಾಡುತ್ತಾರೆ. ಇದು ಜ್ಞಾನವಲ್ಲ. ತಿಳುವಳಿಕೆಯ ಕುರುಹಲ್ಲ ಅಜ್ಞಾನದ, ತಿಳಿಯದಿದ್ದುದರ ಹೆಗ್ಗುರುತು.

ಈಗ ದೇಶದ ವಿಷಯ ನೋಡೋಣ. ದೇಶದ ಹಿತ ಸಾಧನೆಯ ವಿಷಯದಲ್ಲಿ ದೇಶವೆಂದರೇನು ಎಂಬದನ್ನು ಪೂರ್ತಿಯೂಗಿ ತಿಳಿದುಕೊಳ್ಳುವದೇ ನಾವು ಮಾಡಬೇಕಾದ ಪ್ರಥಮ ಕರ್ತವ್ಯ. ಪೂರ್ತಿರಂಗಕ್ಕಿಳಿಯದೆ ಕಾರ್ಯಮಾಡಿದವರಾದರೆ ದೇಶದ ಅಹಿತವನ್ನೇ ಮಾಡುವೆವು. ಅಲ್ಪ ಸ್ವಲ್ಪ ತಿಳಿವಳಿಕೆಯೆನ್ನುವದು ಅಜ್ಞಾನ, ಮೌಢ್ಯ ಇಂಥ ಅಜ್ಞಾನ, ಮೌಢ್ಯದಿಂದ ತುಂಬಿದ ಜನಂದ್ದ ದೇಶವು ತನ್ನ ಹಿತ ಸಾಧಿಸಿಕೊಳ್ಳುವದಾದರೂ ಎಂತು? ತಮ್ಮ ಳಗಣ ಮೌಢ್ಯಕ್ಕೆ ಅರ್ಧ ಮರ್ಧ ತಿಲಾಂಜಲಿಕೊಡಲಿಕ್ಕಾಗುವದಿಲ್ಲ. ಹಾಗೆ ಕಾರ್ಯ ಮಾಡುವದು ಹೇಡಿತನ, ಅವಿಚಾರವೇ ಸರಿ.

ಸಾವಕಾಶ-ಸಾವಕಾಶವಾಗಿ ತಿಳಿದು ಮಾಡಬೇಕಾದ ಸಂಗತಿಗಳೂ ಇಲ್ಲವೆಂದು ನಾನೆನ್ನುವದಿಲ್ಲ. ನಿಮ್ಮ ಹಾದಿಯನ್ನು ನೀವು ಕಂಡುಕೊಳ್ಳಬೇಕಾದಾಗ ಅದು ಬೇಕು. ಆದರೆ ಆಂತರಿಕ ವಿಚಾರದಲ್ಲಿ ಮಾತ್ರ ಪೂರ್ತಿಯೂಗಿ ಒಮ್ಮೆಲೇ ರಂಗಕ್ಕಿಳಿಯಬೇಕು. ಅಲ್ಲಿಯ ಹಕ್ಕು ಬಾಧ್ಯತೆಗಳೂ ಸುಖ ಸುಖಗಳೂ ನಿಮ್ಮವೇ ಅಲ್ಲವೆ? ಬಾಹ್ಯ ವಿಚಾರದಲ್ಲಿ ನಿಧಾನವಾಗಿರಬಹುದು. ಆಂತರಿಕವೆಂದರೆ ಅಲ್ಲಿ ಇನ್ನೊಬ್ಬರ ವಿಚಾರವಿಲ್ಲ. ದೃಷ್ಟಾಂತಕ್ಕೆ ತಂಬಾಕು ಸೇದುವವನೊಬ್ಬನು ಸಾವಕಾಶವಾಗಿ ಅದನ್ನು ಬಿಡ ತ್ನೇನೆಂದರೆ ಅದು ಸರ್ವಥಾ ಆಗದ ಮಾತು. ಬಿಡುವದಾದರೆ ಒಮ್ಮೆಲೇ ಬಿಟ್ಟು ಬಿಡಬೇಕು ಪೂರ್ತಿಯೂಗಿ ಇದು ತಂಬಾಕು ಸೇದುವವನ ಸ್ವತಃದ ವಿಚಾರ. ಇಲ್ಲಿ ಅವನು ಪೂರ್ತಿ ರಂಗಕ್ಕಿಳಿಯದೆ ಹೋದರೆ ನಡೆಯದು. ಆದರೆ ಸಮಾಜದಲ್ಲಿ ಅದೇ ತಂಬಾಕು ಸೇವನೆಯೇ ಇರಬಾರದು ಎಂದರೆ ಇಲ್ಲಿ ಅನೇಕ ಜನರ ವಿಷಯವಾಗ ಸಾವಕಾಶವಾಗಿಯೇ ಕೆಲಸವಾಗಬೇಕಾಗುವದು. ಯಾಕೆಂದರೆ ಇಲ್ಲಿ ಅಸಡ್ಡೆಗಳು ಹೆಚ್ಚು. ವ್ಯಕ್ತಿಗತವಾದ ವಿಚಾರದಲ್ಲಿ ಪೂರ್ತಿಯೂಗಿಯೂ, ಸಾಮುದಾಯಿಕವಾದ ವಿಷಯದಲ್ಲಿ ನಿಧಾನವಾಗಿಯೂ ಕಾರ್ಯವಾಗಬೇಕಾಗುತ್ತದೆ. ವಯ್ಯಕ್ತಿಕ ವಿಷಯಗಳಲ್ಲಿ ಒಮ್ಮೆಲೇ ರಂಗಕ್ಕಿಳಿಯದವನು ಹೇಡಿ.

ತಮ್ಮ ಸುಖಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಹಿಂದಿನ ಹೆಜ್ಜೆಯನ್ನೇ ಅನುಕರಿಸುವದು ಜನತೆಯ ಸ್ವಭಾವ. ದೃಷ್ಟಾಂತಕ್ಕೆ ಸಭೆಯಲ್ಲಿ ಸ್ವಾತಂತ್ರದ ವಿಚಾರವಾಗಿ ದೀರ್ಘ ಭಾಷಣ ಮಾಡಿದವರು ವಿಧವಾ ವಿವಾಹಕ್ಕೆ ಪ್ರತಿಕೂಲವಾಗುವದನ್ನು ನೋಡಿದರೆ ಈ ವಿಷಯವು ತಿಳಿಯುವದು. ವಿಧವಾ ವಿವಾಹದಿಂದ ಗಂಡಸಿನ ಅನುಕೂಲತೆಗೆ ತೊಂದರೆ ಬರಬಹುದೆಂಬದೇ ಇದಕ್ಕೆ ಕಾರಣ. ಹಾಗೆಯೇ ಹಿಂದೂಸ್ಥಾನದ ಸ್ವರಾಜ್ಯವೆಂದರೆ ಈಗಿರುವ ಇತರ ದೇಶಗಳಿಗಿರುವ ಸ್ವರಾಜ್ಯದಂತೆ ಎಂದು ಹೆಚ್ಚಿನ ಜನರ ಕಲ್ಪನೆ. ಆದರೆ ಈಗ ಇತರ ದೇಶಗಳು ತಮಗಿರುವ ಸ್ವಾತಂತ್ರ್ಯದ ಬಲದಿಂದ ಮತ್ತೊಂದು ದೇಶವನ್ನು ಅಡಿಯೂಳಾಗಿ ಮಾಡಿಕೊಂಡು ತಮ್ಮ ಸುಖಕ್ಕೆ ಅನುಕೂಲತೆಯನ್ನು ಮಾಡಿಕೊಳ್ಳುವಂತೆ ತಾವೂ ಮಾಡಿಕೊಳ್ಳಬಹುದು ಎಂದು ಅವರ ವಿಚಾರ. ಹೀಗಾದರೆ ಅದಕ್ಕೆ ಸ್ವರಾಜ್ಯವೆನ್ನಲಾಗದು; ಅದು ಸಾಮ್ರಾಜ್ಯವಾಗುವದು. ನಮಗೆ ಸಾಮ್ರಾಜ್ಯ ಬೇಡ, ಸ್ವರಾಜ್ಯವೇಬೇಕು ಎಂದು ಗಾಂಧಿಜಿಯವರು ಸ್ಪಷ್ಟವಾಗಿ ಹೇಳಿದ್ದಾರೆ. ಸ್ವರಾಜ್ಯವೆಂದರೆ ಸಕಲ ಜಗತ್ತಿನ ಹಿತಕ್ಕೂ ಸುಖಕ್ಕೂ ಹಾದಿಯೂಗಿರಬೇಕು ಎಂಬುದೇ ಅವರ ವ್ಯಾಖ್ಯೆ. ಹಿಂದೂಸ್ಥಾನಕ್ಕೆ ಸ್ವರಾಜ್ಯವಿರಬೇಕಾದುದು ಅದಕ್ಕೆ ಇತರರಿಂದ ತನ್ನ ಲಾಭ ಮಾಡಿಕೊಳ್ಳಲು ಅವಕಾಶ ಮಾಡಿಕೊಡಲಿಕ್ಕಲ್ಲ ಒಂದು ವಾದ್ಯದಲ್ಲಿ ಒಂದು ಸ್ವರವು ಕೆಟ್ಟರೆ ಇತರ ಸ್ವರಗಳೂ ಹೇಗೆ ಪ್ರಯೋಜನಕ್ಕೆ ಬಾರವೋ, ಹಾಗೆಯೇ ಈ ಲೋಕದಲ್ಲಿ ಒಂದು ದೇಶವು ಕೆಟ್ಟರುವಾಗ ಇತರ ದೇಶಗಳಿಗೂ ಸುಖವಿರದು. ಸದ್ಯಕ್ಕೆ ಹಿಂದೂಸ್ಥಾನವು ಕೆಟ್ಟಿರುವ ಸ್ವರ, ಅಂತೇ ಅದು ಸರಿಯೂಗಬೇಕು ಜಗತ್ತಿನ ಹಿತಕ್ಕಾಗಿ ಅದಕ್ಕೆ ಸ್ವರಾಜ್ಯ ಬೇಕು ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. ಅಲ್ಲದೆ ಸ್ವಾತಂತ್ರ್ಯ ಬಲದಿಂತ ಇತರರನ್ನು ಗತಿಗೇಡಗಳಾಗಿಸಲಿಕ್ಕೆ ಅಲ್ಲನೇ ಅಲ್ಲ.

ಹೀಗೆ ಮೊಟ್ಟ ಮೊದಲು ಅಂತರಂಗದಲ್ಲಿಯೇ ಪೂರ್ತಿ ರಂಗಕ್ಕಿಳಿಯದೆ ಸ್ವರಾಜ್ಯ ಬೇಕೆನ್ನುವದರಲ್ಲಿ ತಥ್ಯವೂ ಇಲ್ಲ, ಹಿತವೂ ಇಲ್ಲ. ಅಂತರಂಗದಲ್ಲಿ ಯಥಾರ್ಥವಾಗಿ ಪೂರ್ತಿ ರಂಗಕ್ಕಿಳಿದ ಮೇಲೆ ಕರ್ಮಮಾರ್ಗದಲ್ಲಿ ನಿಧಾನವಾಗಿ ಯೋಚಿಸಿ ಹೆಜ್ಜೆ ಹಾಕಬಹುದು. ಹೆಜ್ಜೆಯು ಸರಿಯಿದ್ದರಾಯಿತ. ಫಲವು ಕೂಡಲೆ ಒಂದಿತೋ ಇಲ್ಲವೊ ಎನ್ನುವದು ಅಲ್ಲಿ ವಿಚಾರವಲ್ಲ. ಈಗ 'ಕರ್ಮಣ್ಯೇ ವಾಧಿಕಾರಸ್ತೇ ಮಾ ಫಲೇಷು ಕದಾಚನ' ಎಂಬದೇ ಮಂತ್ರ. ಕಾರ್ಯಕ್ಕೆ ಕೂಡಲೆ ಫಲವಾಗಬೇಕೆನ್ನುವ ಅವಸರದಿಂದ ಹಾನಿಯೂಗುವ ಸಂಭವವೇ ಹೆಚ್ಚು. ಈ ತತ್ವವನ್ನು ಗಾಂಧಿಯವರು ತಮ್ಮ ಜೀವನದ ಮಾದರಿಯಿಂದಲೇ ಕಲಿಸುತ್ತಿಲ್ಲವೆ?

ಮಾತಿನ ಹಿಂದೆ ಅಂತರಂಗವಿಲ್ಲದಿದ್ದರೆ ಪೂರ್ತಿ ರಂಗಕ್ಕಿಳಿಯಲಾಗುವುದಿಲ್ಲ. ಹಾಗಿಲ್ಲದಿರುವುದರಿಂದಲೇ ನಾವು ಶಕ್ತಿವಂತರಾಗಿಲ್ಲ. ವಿಚಾರವು ಶಕ್ತಿಯುತವಾಗಿರಬೇಕು. ಅದು ಗಿಳಿಪಾಠವಾಗಿರಕೂಡದು. ನಮ್ಮ ವಿಚಾರದಲ್ಲಿ ಸ್ಪಷ್ಟವಾದ ತಿಳಿವಳಿಕೆಯೂಗಿ ಅಲ್ಲಿ ಮೊದಲು ಪೂರ್ತಿ ರಂಗಕ್ಕಿಳಿಯುವದರಿಂದಲೇ ದೇಶದ ನಿಜ ಸೇವೆಯನ್ನು ಪ್ರಾರಂಭಿಸಿಸಿಂತಾಗುವದು.

ಯಾವ ಶಬ್ದವನ್ನೇ ಆಗಲೀ ಉಪಯೋಗಿಸುವದಾದರೂ ಅದನ್ನು ಪೂರ್ತಿಯೂಗಿ ತಿಳಿದೇ ಉಪಯೋಗಿಸಬೇಕು. ಅವರಿವರು ಹೇಳಿದ್ದನ್ನು ತಿರುಗಿ ಹೇಳುವದು ಜಾಣತನವಲ್ಲ. ಅದು ಗಿಳಿ ಪಾಠ ಅದನ್ನು ಮಾಡುವವರಿಗೆ ಶಕ್ತಿಯೂದರೂ ಹೇಗೆಲ್ಲಿಂದ ಒಂದೀತು? ಶಕ್ತಿ ಹೀನರಿಂದ ಆಗುವ ಕೆಲಸವಾದರೂ ಏನು?

ತಿಳಿವಳಿಕೆಯೆಂದರೇನು? ಶಬ್ದದ ಅರ್ಥ, ಪ್ರತ್ಯಯ, ಭಾವನೆಗಳನ್ನು ಅನುಭವಿಸುವದೇ ತಿಳುವಳಿಕೆ. ಅರ್ಥವೆಂದರೆ ಒಂದು ಶಬ್ದಕ್ಕಿರುವ ಪರ್ಯಾಯ ಜ್ಞಾನ ಮಾತ್ರ ಪ್ರತ್ಯಯವೆಂದರೆ ಅದೇ ಮನಮುಟ್ಟಿಕೊಂಡು ಬರುವದು. ಪ್ರತ್ಯಯದಿಂದ ಭಾವವುಂಟಾಗುತ್ತದೆ

ಭಾವದಿಂದಲೇ, 'ಸ್ಫೂರ್ತಿ' ಸ್ಫೂರ್ತಿಯಲ್ಲಿದೆ ಶಕ್ತಿಯೆಂಬದು. ಶಬ್ದದಿಂದ ಅರ್ಥಕ್ಕೆ ಅರ್ಥದಿಂದ ಪ್ರತ್ಯಯಕ್ಕೆ, ಪ್ರತ್ಯಯದಿಂದ ಭಾವಕ್ಕೆ ಬಂದು ಮುಟ್ಟಿಕೊಳ್ಳುವದೇ ಪೂರ್ತಿ ರಂಗಕ್ಕಿಳಿಯುವ ಮಾರ್ಗ. ಆಗಲೇ ಕ್ರಿಯೆ. ಅಲ್ಲಿ ಉಂಟಾದ ಸ್ಫೂರ್ತಿಯು ವ್ಯಕ್ತಿಯನ್ನು ತಾನೇ ರಂಗಕ್ಕಿಳಿಸುತ್ತದೆ. ಅದರಲ್ಲಿಯೇ ಶಕ್ತಿಯಿದೆ. ಆ ಶಕ್ತಿಯೇ ಎಲ್ಲ ಘನ ಕರ್ಮಗಳಿಗೂ ಆಧಾರ. ಅದೇ ಇಲ್ಲದೆ, ಅದನ್ನೇ ಮೊದಲು ಸಂಪಾದಿಸದೆ, ದೇಶಸೇವೆಯ ಉತ್ತಮ ಹಾದಿಯ ಮಾತಾಡಲೂ ವ್ಯರ್ಥವೇತಕ್ಕೆ?

ಗಾಂಧಿತತ್ವವೊಂದೇ ಯೂರೋಪನ್ನು ಉಳಿಸಬಲ್ಲದು.

ಯೂರೋಪಿನಲ್ಲಿ ಸುಧಾರಣೆ, ಸುಧಾರಣೆಯೆಂದು ಸುಧಾರಣೆಯು ಅತ್ಯುನ್ನತಿಗೆ ಹೋಗಿದ್ದು ಒಂದು ರಾಷ್ಟ್ರವು ಮತ್ತೊಂದು ರಾಷ್ಟ್ರವನ್ನು ನುಂಗಬೇಕೆಂಬ ಹವಣಿಕೆಯಲ್ಲಿದ್ದು ಪ್ರತಿಯೊಂದು ರಾಷ್ಟ್ರವೂ ಯುದ್ಧ ಸನ್ನಾಹವನ್ನು ಜೋರಿನಿಂದ ಬೆಳೆಸುತ್ತಿವೆ, ಶಾಂತತೆ ಇಲ್ಲದಾಗಿದೆ. ಯೂರೋಪಿನಲ್ಲಿಯ ಈಗಿನ ಯುದ್ಧದ ಭೀಕರ ಸ್ವರೂಪವನ್ನು ನೆನೆಸಿದರಂತೂ ಯೂರೋಪು ಉಳಿಯುವುದಿಲ್ಲವೋ? ಎಂಬ ಶಂಕೆಯುತ್ಪನ್ನವಾಗಹತ್ತಿದೆ. ಈ ವಿಷಯವಾಗಿ ಕೆನಡದ ಟಿಡ್‌ಮನ್ ಎಂಬವನು—ಯೂರೋಪಿನ ನಿವಾಸಿಗಳು ತಮ್ಮ ಸದ್ಯದ ಸರ್ಕಾರಗಳನ್ನು ಎದುರಿಸಬೇಕು. ಮತ್ತು ಸಂಪೂರ್ಣವಾಗಿ ಯುದ್ಧ ಪದ್ಧತಿಗೇನೇ ತಿಲಾಂಜಲಿಯನ್ನೀಯಬೇಕು. ಇದಲ್ಲದೆ ಉಳುವಂಥ ವರ್ಗಗಳಿಂದಲೇ ಜೀವಿಯೂಗಿ ಪ್ರೇಮ ಮತ್ತು ಬಂಧುತ್ವದಿಂದ ಕೂಡಿದಂಥ ಗಾಂಧಿತತ್ವವನ್ನನುಸರಿಸಬೇಕು. ಅಂದರೇನೇ ಯೂರೋಪು ಉಳಿಯುವುದು. ಇಲ್ಲದಿದ್ದರೆ ಸಂಪೂರ್ಣ ಅಳಿಯುವುದು. ಎಂದು 'ನ್ಯೂಬ್ಲಿಟ್ ಲುಕ್' ಎಂಬ ಪತ್ರದಲ್ಲಿ ಬರೆದಿದ್ದಾರೆ.

ಟಿಡ್‌ಮನ್ನರು ತಮ್ಮ ಒರವಣಿಗೆಯನ್ನು ಮುಂದುವರಿಸುತ್ತಾ—ಗಾಂಧಿ ತತ್ವವು ಎಷ್ಟೊಂದು ಪರಿಣಾಮಕಾರಿಯಾದೆ ಮತ್ತು ಅದರಿಂದ ಯುದ್ಧದ ಪದ್ಧತಿಯು ಹೇಗೆ ನಾಶವಾಗುತ್ತದೆ ಎಂಬುದನ್ನು ವಿಶದವಾಗಿ ಬರೆದಿರುವರು. ಮತ್ತು ಗಾಂಧಿ ತತ್ವವು ಕಾವ್ಪಿಕವಾದ ಇಲ್ಲವೇ ಫ್ಯಾಸಿಜಮ್ ಅಥವಾ ಭಂಡವಲಶಾಹಿ ಇರದೆ ಸಂಪೂರ್ಣ ಅಹಿಂಸಾವಾದವಾಗಿದೆಯೆಂದು ತಮ್ಮ ಸ್ಪಷ್ಟ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

'ಲೊ. ಮ.'

ಇಂದೇ ಆರಂಭಿಸಿರಿ!
ಸುಪ್ರಸಿದ್ಧ
ಆತಂಕನಿಗ್ರಹ ಮಾತ್ರೆ
ಗಳನ್ನು ಉಪಯೋಗಿಸಲಿಕ್ಕೆ.
ಜೀವನದ ಜಯಶೀಲತೆಯ ಏಣಿಯನ್ನೇರಿರಿ. ಲೋಕದೆಲ್ಲಿ ಸಾವಿರಾರು ಜನರು ಅದನ್ನು ಪ್ರತಿದಿನವೂ ಉಪಯೋಗಿಸುತ್ತಿದ್ದಾರೆ.
ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.
ಆರೋಗ್ಯಕ್ಕೆ ಕವಚವು
32 ಮಾತ್ರೆಗಳ ಟಿನ್ನೊಂದಕ್ಕೆ ರೂ. 1.
ಹೆಚ್ಚಿನ ವಿವರಕ್ಕೆ, ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ
ಕಾಮುಶಾಸ್ತ್ರನನ್ನೋದಿರಿ.
ಆತಂಕನಿಗ್ರಹ ಫಾರ್ಮಸಿ, ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.
52—1

ಕೊಡಗು

ಮೂರ್ಚಿ ತಾ. ೧೦ನೇ ಶುಕ್ರವಾರ ೧೯೩೬.

ಸರ್ಕಾರಿ ಉದ್ಯೋಗಸ್ಥರ ಸಂಬಳದ ಹೊಸ ದರಗಳು.

ಚೀಫ್ ಕಮಿಷನರವರ ನಿಬಂಧನೆ ಮಾಡುವ ಅಧಿಕಾರ ಕ್ಕೊಳಪಟ್ಟ ಸರ್ಕಾರಿ ಉದ್ಯೋಗಸ್ಥರ ಸಂಬಳದ ಹೊಸ ದರಗಳು ಈ ತಿಂಗಳ ಕೊಡಗು ಗಜೆಟಿನಲ್ಲಿ ಪ್ರಕಟವಾಗಿವೆ. ಈ ದರಗಳು (1) 1931ನೇ ಜುಲೈ 16 ರಲ್ಲಿ ಯೂ ನಂತರ ಸರ್ಕಾರಿ ಉದ್ಯೋಗಕ್ಕೆ ಸೇರಿದವರಿಗೂ, (2) 1931 ನೇ ಜುಲೈ 15 ರಲ್ಲಿ ಸರ್ಕಾರಿ ಉದ್ಯೋಗದಲ್ಲಿದ್ದು ನಂತರ ಸರ್ವಿಸಿನಿಂದ ಮಧ್ಯದಲ್ಲಿ ಬಿಡುಗಡೆಮಾಡಲ್ಪಟ್ಟಿದ್ದವರಿಗೂ, (3) 1931 ನೇ ಜುಲೈ 15ರ ನಂತರ ಕೆಲಸದಲ್ಲಿ ಖಾಯಂ ಮಾಡಲ್ಪಟ್ಟವರಿಗೂ, (4) 1931 ನೇ ಜುಲೈ 16 ರ ಮೊದಲು ನಡೆದ ಸ್ಪರ್ಧೆ ಪರೀಕ್ಷೆಯ ಫಲಿತಾಂಶವಾಗಿ ನೇಮಿಸಲ್ಪಟ್ಟವರಿಗೂ, (5) 1931ನೇ ಜುಲೈ 15 ರಲ್ಲಿ ವೇತನ ಪಡೆದು ತರಬೇತು ಹೊಂದುತ್ತಿದ್ದವರಿಗೂ 1936ನೇ ಮಾರ್ಚಿ ತಾ. 1 ರಿಂದ ಅನ್ವಯಿಸುವುದು. ಆದರೆ (3), (4) ಮತ್ತು (5)ನೇ ವರ್ಗಗಳವರಿಗೆ ಒದಲಾಯಿಸಿದ ದರಗಳು ಜಾರಿಗೆ ತರ್ಪಡುವವೆಂದು ಮೊದಲೇ ಎಚ್ಚರಿಕೆ ಕೊಟ್ಟಿದ್ದಿರಬೇಕು.

ಸರ್ಕಾರದ ಉತ್ಪತ್ತಿಯು ಕಡಿಮೆಯಾಗುತ್ತಾ ಬರುತ್ತಿರುವಲ್ಲು ಅಡಳಿತೆ ನಡಿಸುವ ವೆಚ್ಚವು ಹೆಚ್ಚುತ್ತಾ ಇರುವುದನ್ನು ತಡೆದು, ಖರ್ಚನ್ನೂ ಖೋತೆ ಮಾಡಲಿಕ್ಕಾಗಿ ಹೊಸ ದರಗಳನ್ನು ನಿಶ್ಚಯಿಸಿರುವುದಾಗಿದೆ. ಆದರೆ ತಲೆ ಭಾರದ ಅಡಳಿತ ಕ್ರಮದಿಂದಲೇ ಸರ್ಕಾರ್ದವರಿಗೆ ಖರ್ಚಿಗೆ ಹಣ ಸಾಲದಿರಲು ಮುಖ್ಯ ಕಾರಣವಾಗಿದೆ ತಲೆ ಭಾರದ ಸರ್ಕಾರವೆಂದರೆ ದೊಡ್ಡ ಅಧಿಕಾರಿಗಳಿಗೆ ವಿಪರೀತ ಸಂಬಳಕೊಟ್ಟು, ಕೆಳ ನವುಕರರಿಗೆ ಜೀವನ ನಡಿಸಲೂ ಕೂಡ ಸಾಲದಷ್ಟು ವೇತನಕೊಡುವ ಕ್ರಮವಾಗಿದೆ. ಈ ತರಹದ ಪದ್ಧತಿಯು ಇಂಡಿಯಾದಲ್ಲಲ್ಲದೆ ಜೇರೆ ಎಲ್ಲೂ ಇಲ್ಲವೆಂದರೆ ತಪ್ಪಾಗಲಾರದು. ಆದ್ದರಿಂದ ನ್ಯಾಯವಾದ ಖರ್ಚು ಖೋತೆ ಮಾಡಬೇಕೆಂದಿದ್ದರೆ ದೊಡ್ಡ ಉದ್ಯೋಗಸ್ಥರ ಸಂಬಳವನ್ನು ಕಡಿಮೆ ಮಾಡಬೇಕಲ್ಲದೆ ಚಿಕ್ಕ ನವುಕರರ ಹೊಟ್ಟೆಗೆ ಹೊಡೆಯುವುದು ಎಂದೂ ನ್ಯಾಯವೆಲ್ಲ.

ಚೀಫ್ ಕಮಿಷನರವರು ಪ್ರಕಟಿಸಿರುವ ಹೊಸ ದರಗಳಲ್ಲಿ ಕೆಲವು ಡಫೇದಾರರುಗಳ, ಕೆಲವು ಚಾಪ್ರಾಸಿಕಾರರುಗಳ ಮತ್ತು ಕೆಲವು ಫಾರೆಸ್ಟು ಗಾರ್ಡುಗಳ ವೇತನವನ್ನು ರೂ. 18 ರಿಂದ ರೂ. 17 ಕ್ಕೂ, ಕಾನ್‌ಸ್ಟೇಬಲ್‌ರುಗಳ ಪ್ರಾರಂಭದ ಸಂಬಳವನ್ನು ರೂ. 17ರಿಂದ ರೂ. 16ಕ್ಕೂ ಇಳಿಸಲ್ಪಟ್ಟಿದೆ. ಇದು ತುಂಬಾ ಅನ್ಯಾಯವೂ, ವ್ಯಸನಕರವೂ ಆಗಿದೆ. ಒಂದು ರೂಪಾಯಿಯ ಇಳಿಸುವಿಕೆಯು ದೊಡ್ಡ ಉದ್ಯೋಗಸ್ಥರಿಗೆ ಅಲ್ಪವಾಗಿ ಕಂಡರೂ ಈ ಬಡ ನವುಕರರಿಗೆ ದೊಡ್ಡ ನಷ್ಟವಾಗುವುದು. ಅವರ ಮತ್ತು ಜವಾನರುಗಳ ಸಂಬಳವನ್ನು ಇಳಿಸುವುದರ ಬದಲು ಸ್ವಲ್ಪ ವಾದರೂ ಹೆಚ್ಚಿಸಬೇಕಾಗಿದೆ. ಅವರು ಮನುಷ್ಯರಾಗಿ ಜೀವಿಸಬೇಕಾದರೆ ಕಮ್ಮಿ ಪಕ್ಷ ಅವರಿಗೆ ಮಾಹೆಯೂನ 20 ರೂಪಾಯಿಯಾದರೂ ಕೊಡುವುದು ಅವಶ್ಯವಾಗಿದೆ.

ಪ್ರತಿ ವರ್ಷ ಬಡ್ತಿ ಕೊಡುವುದರ ಬದಲು ಎರಡು ವರ್ಷಕ್ಕೊಂದಾವರ್ತಿ ಬಡ್ತಿ ಕೊಡುವುದು ಹೆಚ್ಚು ಕಮ್ಮಿ ಎಲ್ಲರಿಗೂ ಅನ್ವಯಿಸುವಂಥ ಬದಲಾವಣೆಯಾಗಿದೆ. ಇದಲ್ಲದೆ ಗುಮಾಸ್ತರುಗಳೇ ಮೊದಲಾದ ಚಿಕ್ಕ ಉದ್ಯೋಗಸ್ಥರ ಸಂಬಳದಲ್ಲಿ ಹೆಚ್ಚಿನ ಬದಲಾವಣೆಗಳಿಲ್ಲ. ಆದರೆ ಅಬ್ಕಾರಿ ಇನ್‌ಸ್ಪೆಕ್ಟರ್, ಚೀಫ್ ಕಮಿಷನರವರ ಆಫೀಸಿನ ಸುಪರಿಂಟೆಂಡೆಂಟರ, ಕಮಿಷನರವರ ಇಂಗ್ಲಿಷ್ ಆಫೀಸು ಮೇನೇಜರ, ಅಸಿಸ್ಟೆಂಟ್ ಕಮಿಷನರವರಆಫೀಸಿನ ಹೆಡ್ಡ್ ಕ್ಲಾರ್ಕರ, ಟ್ರೆಜರಿ ಆಫೀಸರ, ಸುಬೇದಾರರುಗಳ, ಸಬ್ ಮೇಜಿಸ್ಟ್ರೇಟರ, ಪೊಲೀಸು ಇನ್‌ಸ್ಪೆಕ್ಟರುಗಳ, ಅಸಿಸ್ಟೆಂಟ್ ಸರ್ಜನರ ಸಂಬಳದ ಪಂಡಿಯಲ್ಲಿ ರೂ. 25 ಇಳಿಸಲ್ಪಟ್ಟಿದೆ. ಇದರಿಂದ ಹೆಚ್ಚು ಕಮ್ಮಿ ಪ್ರತಿಯೊಂದು ಇಲಾಖೆಯ ಗಜೆಟೆಡ್ ಅಲ್ಲದ ದೊಡ್ಡ ಉದ್ಯೋಗಸ್ಥರ ಸಂಬಳದಲ್ಲಿ ಸ್ವಲ್ಪ ಖೋತೆ ಮಾಡಿದಂತಾಯಿತು. ರೇಂಜರು ಮತ್ತು ಪೊಲೀಸು ಸಬ್ ಇನ್‌ಸ್ಪೆಕ್ಟರುಗಳಿಗೆ ವರ್ಷಂಪ್ರತಿ ಒಡ್ತಿ ಕೊಡುತ್ತಿದ್ದ ಪದ್ಧತಿಯ ಒಡಲು 'ಗ್ರೇಡ್' ಸಂಬಳದ ಕ್ರಮವನ್ನು ಹಿಡಲಾಗಿದೆ.

ಈ ಹೊಸ ದರಗಳಲ್ಲಿ ವಿದ್ಯಾ ಇಲಾಖೆಗೆ ತಗಲಿದಷ್ಟು ಪೆಟ್ಟು ಜೇರೆ ಯಾವ ಇಲಾಖೆಗೂ ತಗಲಿರುವುದಿಲ್ಲ. ಶಾಲಾ ಡೆಪ್ಯುಟಿ ಇನ್‌ಸ್ಪೆಕ್ಟರವರ ಸಂಬಳದಲ್ಲಿ ರೂ. 50 ರಷ್ಟು, ಹೈ ಸ್ಕೂಲುಗಳ ಹೆಡ್ ಮಾಸ್ಟರುಗಳ ಸಂಬಳದಲ್ಲಿ ರೂ 75 ರಷ್ಟು ಗ್ರಾಡ್ಯುವೇಟ್ ಉಪಾಧ್ಯಾಯರುಗಳ ಸಂಬಳದಲ್ಲಿ ರೂ 50 ರಷ್ಟು, ಸೆಕೆಂಡರಿ ಗ್ರೇಡಿನ ಅಸಿಸ್ಟೆಂಟ್ ಉಪಾಧ್ಯಾಯರುಗಳ ಸಂಬಳದಲ್ಲಿ ರೂ. 15 ರಷ್ಟು, ಹೈಯರ್ ಎಲಿಮೆಂಟರಿ ಗ್ರೇಡಿನ ಉಪಾಧ್ಯಾಯರುಗಳ ಸಂಬಳದಲ್ಲಿ ರೂ. 10 ರಷ್ಟು, ಸಂಸ್ಕೃತ ಮತ್ತು ಕನ್ನಡ ಪಂಡಿತರುಗಳ ಸಂಬಳದಲ್ಲಿ ರೂ. 25 ರಷ್ಟು, ಉರ್ದು ಉಪಾಧ್ಯಾಯರ ಸಂಬಳದಲ್ಲಿ ರೂ. 10 ರಷ್ಟು, ಷಾರ್ಟ್ ಹ್ಯಾಂಡ್ ಮತ್ತು ಟೈಪ್ ರೈಟಿಂಗ್ ಉಪಾಧ್ಯಾಯರ ಸಂಬಳದಲ್ಲಿ ರೂ. 30 ರಷ್ಟು, ಸುಪರ್ ವೈಜರುಗಳ ಸಂಬಳದಲ್ಲಿ ರೂ. 10 ರಷ್ಟು ಕಡಿಮೆ ಮಾಡಲಾಗಿದೆ. ಸೆಕೆಂಡರಿ ಗ್ರೇಡ್ ಉಪಾಧ್ಯಾಯರುಗಳಿಗೆ ರೂ. 40 ರಿಂದ 70 ರ ವರೆಗೆ ಇದ್ದದ್ದು ರೂ. 30 ರಿಂದ 55 ರ ವರೆಗೂ ಹಯರ್ ಎಲಿಮೆಂಟರಿ ಉಪಾಧ್ಯಾಯರುಗಳಿಗೆ ರೂ. 30 ರಿಂದ 55ರ ವರೆಗೆ ಇದ್ದದ್ದು ರೂ. 23 ರಿಂದ 45 ರ ವರೆಗೂ, ಪಂಡಿತರುಗಳಿಗೆ ರೂ. 50 ರಿಂದ 70 ರ ವರೆಗೆ ಇದ್ದದ್ದು ರೂ. 35 ರಿಂದ 45 ರ ವರೆಗೂ ಇಳಿಸಲ್ಪಟ್ಟಿದೆ. ಇದು ದೊಡ್ಡ ಅನ್ಯಾಯವೆಂದೇ ಹೇಳಬೇಕಾಗಿದೆ. ಈ ಇಲಾಖೆಯವರ ಸಂಬಳದ ದರವನ್ನು ಬೇರೆ ಇಲಾಖೆಯವರೊಂದಿಗೆ ಹೋಲಿಸಿದರೆ ದೊಡ್ಡ ವ್ಯತ್ಯಾಸ ಕಂಡು ಬರುತ್ತದೆ ಉಪಾಧ್ಯಾಯರುಗಳಿಗೆ ಇತರ ಇಲಾಖೆಯವರಂತೆ ಜನಸಾಮಾನ್ಯರ ಮೇಲೆ ಅಧಿಕಾರ ಚಲಾವಣೆ ಮಾಡುವ ಅವಕಾಶ ಕಡಿಮೆ. ಆದಕಾರಣ ಜನಸಮುದಾಯದವರು ಅವರನ್ನು ಸನ್ಮಾನಿಸುವುದು ಕಡಿಮೆಯೆಂದರೆ ತಪ್ಪಾಗಲಾರದು. ಇದರೊಂದಿಗೆ ಅವರ ಸಂಬಳವನ್ನೂ ಬೇರೆ ಇಲಾಖೆಯವರದಕ್ಕಿಂತ ಹೆಚ್ಚು ಇಳಿಸಿಬಿಡುವದೆಂದರೆ ಘೋರಯಕ್ಕೆ ಉಪ್ಪು ಹಾಕಿದಂತಾಗುವುದು. ನಮ್ಮ ಮುಂದಿನ ಜನಾಂಗದವರನ್ನು ಕಯೂರುವಂಥ ಪವಿತ್ರ ಕರ್ತವ್ಯವು ಉಪಾಧ್ಯಾಯರದಾಗಿದೆ. ಅಜ್ಞಾನದ ಕತ್ತಲೆಯನ್ನು ಹೋಗಲಾಡಿಸಿ ಜ್ಞಾನದ ಬೆಳಕನ್ನು ಹಂಡುವ ಪುಣ್ಯ ಕಾರ್ಯವು ಅವರಿಗೆ ಸೇರಿದೆ. ಆದುದರಿಂದ ಅವರ ಜೀವನ ನಡಿಸುವುದರಲ್ಲಿ ಅವರಿಗೆ ಹೆಚ್ಚಿನ ಅತೃಪ್ತಿಗೆ ಎಡೆಕೊಟ್ಟರೆ ಅವರ ಕರ್ತವ್ಯವನ್ನು ಅವರು ಸಮರ್ಪಕವಾಗಿ ಮಾಡಲಾರರು. ಆದಕಾರಣ ಒಡ ಉಪಾಧ್ಯಾಯರುಗಳ ಸಂಬಳದ ಹೊಸ ದರಗಳನ್ನು ಕುರಿತು ಚೀಫ್ ಕಮಿಷನರವರು ಪುನರಾಲೋಚನೆ ಮಾಡುವುದು ಯುಕ್ತವೂ, ಅಗತ್ಯವೂ ಆಗಿದೆ.

ಕಾಂಗ್ರೆಸು ಕಮಿಟಿಯ ತೀರ್ಮಾನ.

ಹೊಸ ರಾಜ್ಯಘಟನೆಯ ಖಂಡನೆ.

ಮಂತ್ರಿಪದವಿಯ ಸ್ವೀಕಾರದ ತೀರ್ಮಾನ ಮುಂದಕ್ಕೆ.

ಬರುವ ಚುನಾವಣೆಗಳಲ್ಲಿ ಕಾಂಗ್ರೆಸು ಸ್ಪರ್ಧಿಸತಕ್ಕದ್ದು.

ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡು ರದ್ದಾಯಿತು.

ಈ ತಾ. 7ರಲ್ಲಿ ಅಲ್ಲಹಾಬಾದಿನಲ್ಲಿ ಕಾಂಗ್ರೆಸು ಕಾರ್ಯಕಾರಿ ಸುಂಡಳಿಯ ಸಭೆಯು ಶ್ರೀ. ರಾಜೇಂದ್ರ ಪ್ರಸಾದರ ದಿವ್ಯ ಅಧ್ಯಕ್ಷತೆಯಲ್ಲಿ ಸೇರಿತ್ತು. ಅಲ್ಲಿ ಪಾಸಾದ ಗೊತುವಳಿಗಳ ಸಾರಾಂಶವೇನೆಂದರೆ:—

'ಇಂಡಿಯ ಸರಕಾರದ 1935ನೇ ಆಕ್ಟಿನ ಪ್ರಕಾರ ಒರಲಿಕ್ಕಿರುವ ಹೊಸ ರಾಜ್ಯಾಂಗ ರಚನೆಯು ಸೈಮನ್ ಕಮಿಶನಿನ ಸಿಫಾರಸುಗಳಿಗಿಂತಲೂ ಕಡಮೆತರದ್ದಾಗಿ ಹಿಂದೀಯರ ನ್ಯಾಯವಾದ ಹಕ್ಕುಭಾದ್ಯತೆಗಳಿಗೆ ಕುಂದಿಕ ತರುವಂಥದ್ದಾಗಿದ್ದು, ಹಿಂದೀಯರನ್ನು ಎಂದೆಂದಿಗೂ ದಾಸ್ಯದಲ್ಲಿಡುವಂಥಾದಾಗಿದ್ದು ಮಿತಿಮೀರಿದ ದಬ್ಬಾಳಿಕೆಗೆ ಅವಕಾಶ ಕೊಡುವಂಥಾದ್ದಿರುವದರಿಂದ ಕಾಂಗ್ರೆಸು ಆ ಹೊಸ ರಚನೆಯನ್ನು ಪೂರ್ಣ ಸಂಪೂರ್ಣವಾಗಿ ತಿರಸ್ಕರಿಸುತ್ತದೆ.

ಭಾರತೀಯರ ರಾಜಕೀಯ ಹಕ್ಕುಭಾದ್ಯತೆಗಳ ವಿಚಾರದಲ್ಲಿ ಇಡೀ ಭಾರತದ ಕೇಳಿಕೆಯನ್ನು ಮಂಡಿಸುವ ಸಂಸ್ಥೆಯೆಂದರೆ ಕಾಂಗ್ರೆಸಾಗಿದೆ. ಆದ್ದರಿಂದ ಭಾರತೀಯರ ನ್ಯಾಯವಾದ ಕೋರಿಕೆಗಳನ್ನು ಮನ್ನಿಸದ ಯಾವದೇ ರಾಜ್ಯಾಂಗ ರಚನೆಯನ್ನು ಕಾಂಗ್ರೆಸು ಸ್ವೀಕರಿಸುವದಿಲ್ಲ.

ಅಂಥಾ ರಾಜ್ಯಾಂಗ ರಚನೆಯು ಹಿಂದೀಯರಿಂದ ಚುನಾಯಿತವಾದ ಒಂದು ಮಹಾ ಸಭೆಯವರಿಂದ (Constituent Assembly) ರಚಿತವಾಗತಕ್ಕದ್ದು ಎಂದು ಕಾಂಗ್ರೆಸಿನ ಅಭಿಮತವಿದೆ.

ಆದ್ದರಿಂದ ಕಾಂಗ್ರೆಸು ಅಂಥ ಒಂದು ಮಹಾಸಭೆಯನ್ನು ನೇಮಕ ಮಾಡಲು ದೇಶದ ಎಲ್ಲಾ ಪುಂಡಾಳುಗಳೂ ಪ್ರಯತ್ನಿಸಬೇಕೆಂದು ಬಿನ್ನೈಸುತ್ತದೆ.

ಈ ಹೊಸ ರಾಜ್ಯಾಂಗ ರಚನೆಯ ಪ್ರಕಾರದ ಹೊಸ ಚುನಾವಣೆಗಳು ಇನ್ನೊಂದು ಕಾಂಗ್ರೆಸ್ಸು ಅಧಿವೇಶನಕ್ಕೆ ಮುಂದಾಗಿ ಬರುವದೆಂದು ತೋರಿಬರುವದರಿಂದ ಆ ಸಂದರ್ಭಗಳಲ್ಲಿ ಕಾಂಗ್ರೆಸ್ಸಿನವರು ತಮ್ಮ ಉಮೇದುವಾರಂನ್ನು ಚುನಾವಣೆಗೆ ಕಾಂಗ್ರೆಸ್ಸಿನ ಧ್ಯೇಯಗಳಿಗನುಸಾರವಾಗಿ ನಿಲ್ಲಿಸಲು ಈ ಕಾಂಗ್ರೆಸು ನಿರ್ಧರಿಸುತ್ತದೆ.

ಕಾಂಗ್ರೆಸ್ಸಿನ ಧ್ಯೇಯಗಳನ್ನು ಶಿರಸಾವಹಿಸಿರುವ ಮತ್ತು ಹಿಂದೀ ಸ್ವಾತಂತ್ರ್ಯ ಸಾಧನೆಗೆಂದು ಸಂಕಲ್ಪಮಾಡಿರುವವರನ್ನೇ ಅಂಥ ಉಮೇದುವಾರರನ್ನಾಗಿ ಮಾಡತಕ್ಕದ್ದು; ಅಲ್ಲದೆ ಅವರು ಆ ಬಗ್ಗೆ ಶಿಸ್ತಿನ ಪ್ರಮಾಣ ಮಾಡತಕ್ಕದ್ದು.

ಚುನಾವಣೆಗಳಿಗೆ ಸ್ವಲ್ಪ ಮುಂಚಿತವಾಗಿ ಅ ಬಾ. ಕಾಂಗ್ರೆಸು ಕಮಿಟಿಯು ದೇಶದ ಆರ್ಥಿಕ ಮತ್ತು ರಾಜಕೀಯ ವಿಚಾರಗಳ ವಿಷಯದ ಒಂದು ಪ್ರಸಿದ್ಧ ಪತ್ರವನ್ನು ಪ್ರಕಟಿಸುವದು,

ಈ ಪ್ರಸಿದ್ಧ ಪತ್ರಕ್ಕೆ ಜೋಡಣೆಗಳನ್ನು ಆಯಾ ಪ್ರಾಂತೀಕ ಕಾ. ಕಮಿಟಿಗಳು ಆಯಾ ಪ್ರಾಂತದ ವಿದ್ಯಮಾನಗಳಿಗನುಗುಣವಾಗಿ ಪ್ರಕಟಿಸಬಹುದು.

ಅಂಥ ಜೋಡಣೆಗಳು ಪ್ರಕಟವಾಗುವದಕ್ಕೆ ಮೊದಲು ಅ. ಬಾ. ಕಾ. ಕ, ಸಮ್ಮತಿಯನ್ನು ಪಡೆಯಬೇಕು.

ಇನ್ನು ಮುಂದಕ್ಕೆ ಕಾಂಗ್ರೆಸು ಪಾರ್ಲಿಮೆಂಟರಿ ಬೋರ್ಡು ರದ್ದಾಗಿ ಅ. ಭಾ. ಕಾ ಕ. ಅದರ ಕಾರ್ಯವನ್ನು ನಿರ್ವಹಿಸತಕ್ಕದ್ದು

ಚುನಾವಣೆಯ ಸಮಯದಲ್ಲಿ ಅಗತ್ಯವಾದಲ್ಲಿ ತಕ್ಕ ಪಿ.ಟಿ ಯೂ ಬೋರ್ಡುಗಳನ್ನು ಸ್ಥಾಪಿಸಿ ಅವುಗಳ ಮೂಲಕ ಕಾರ್ಯವನ್ನು ಸಾಧಿಸುವ ಹಕ್ಕು ಕಾರ್ಯನಿರ್ವಾಹಕ ಮಂಡಳಿಗಿರತಕ್ಕದ್ದು,

ಆದ್ದರಿಂದ ಪಾರ್ಲಿಮೆಂಟರಿ ಬೋರ್ಡು ಇನ್ನು ಮುಂದಕ್ಕೆ ಸ್ಥಾಪಿಸಲ್ಪಡಬೇಕಾದ್ದಿಲ್ಲ.

ಚುನಾಯಿತರಾದ ಕಾಂಗ್ರೆಸು ಸದಸ್ಯರು ಮಂತ್ರಿ ಪದವಿಯನ್ನು ಸ್ವೀಕರಿಸಬೇಕೋ ಎನ್ನುವ ವಿಚಾರದ ಬಗ್ಗೆ ಕ್ಷಿಪ್ರ ತೀರ್ಮಾನಕ್ಕೆ ಬರುವ ಸಮಯವಿನ್ನು ಬಂದಿರುವದಿಲ್ಲ ಕಾರಣ ಆ ವಿಚಾರದಲ್ಲಿ ಪ್ರಾಂತೀಕ ಕಮಿಟಿಗಳ ಅಭಿಪ್ರಾಯಗಳನ್ನು ಪಡೆದು ಅ. ಬಿತಾ. ಕಾ. ಕ. ಯವರು ಸಮಯೋಚಿತವಾಗಿ ತೀರ್ಮಾನಿಸಬಹುದು.

ಜಮಿನ್ದಾರರ ಸಂಘದ ಕಮಿಟಿ ವಿಂಟಿಂಗು.

ಕೊಡಗು ಜಮಿನ್ದಾರರ ಸಂಘದ ಕಾರ್ಯಕಾರಿ ಮಂಡಳಿಯ ವಿಂಟಿಂಗು ಈ ತಾ. 8 ರಲ್ಲಿ ವೀರಾಜಪೇಟೆಯಲ್ಲಿ ನಡೆಯಿತು. ಸಂಘದ ಪ್ರೆಸಿಡೆಂಟರಾದ ಮ. ರಾ. ಪಿ. ಐ ಬೆಳ್ಯಪ್ಪನವರು ಅಧ್ಯಕ್ಷರಾಗಿದ್ದರು.

1. ಕಳೆದ ಕಮಿಟಿ ವಿಂಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಗಿತು.

2. ಸಂಘದ ಕಮಿಟಿಯವರಿಂದ ನೇಮಿಸಲ್ಪಟ್ಟ ಡೆಪ್ಯುಟೀ ಶನಿನವರು ಗಂಧದ ಮರದ ಬೋನಸು ವಿಷಯ ಬದಲಾವಣೆ ಮಾಡಿ ಚೀಫ್ ಕಮಿಷನರವರಿಗೆ ಕಳುಹಿಸಿದ ತಿದ್ದು ಪಡಿಯ ನಿಬಂಧನೆಗಳನ್ನು ಓದಿ ಒಪ್ಪಲಾಯಿತು.

3. ಈ ವರ್ಷ ಜಮಿನ್ದಾರರ ಸಂಘದ ಮಹಾ ಸಭೆಯನ್ನು ವೀರಾಜಪೇಟೆಯಲ್ಲಿ ನಡಿಸುವಂತೆ ತೀರ್ಮಾನಿಸಲಾಯಿತು.

4. ಈ ಮಹಾಸಭೆಯನ್ನು ಬರುವ ಮೇ ತಾ. 1 ರಿಂದ 15 ರೊಳಗೆ ನಡಿಸುವಂತೆ ನಿಶ್ಚಯಿಸಲಾಯಿತು.

5. ಮಹಾಸಭೆಯ ಅಧ್ಯಕ್ಷಪದವಿಗನ್ನು ನಹಿಸಲು—1. ಪಂಡಿತ ಮದನಮೋಹನ ಮಾಳವೀಯರು, 2. ಶ್ರೀ ಸಿ. ಆರ್. ರೆಡ್ಡಿಯವರು, 3. ಶ್ರೀಮತಿ ಕಮಲಾದೇವಿಯವರು, 4. ಶ್ರೀಮತಿ ರುಕ್ಮಿಣಿ ಲಕ್ಷ್ಮೀಪತಿಯವರು ಮತ್ತು 5. ಶ್ರೀ ಅವಿನಾಶಲಿಂಗಂ ಚೆಟ್ಟಿಯಾರವರು—ಇವರುಗಳನ್ನು ಕ್ರಮಪ್ರಕಾರ ಬರೆದು ಕೇಳಿ ಒಬ್ಬರನ್ನು ಆರಿಸಿಕೊಳ್ಳುವಂತೆ ನಿಶ್ಚಯಿಸಲಾಯಿತು.

6. ವಾರ್ಷಿಕ ಮಹಾಸಭೆಯ ಸ್ವಾಗತ ಏರ್ಪಾಡುಗಳಿಗಾಗಿ ತಕ್ಕ ವ್ಯವಸ್ಥೆಮಾಡುವಂತೆ ಎಡೆನಾಲ್ಕುನಾಡು ತಾಲೋಕಿನ ಕಮಿಟಿ ಮೆಂಬರುಗಳನ್ನು ಕೇಳಿಕೊಳ್ಳುವಂತೆ ತೀರ್ಮಾನಿಸಲಾಯಿತು.

7. ಸಂಘದ ಹಳೇ ಮೆಂಬರುಗಳಿಂದ ವಾರ್ಷಿಕ ಚಂದಾವನ್ನು ವಸೂಲಿಮಾಡಲು ಮತ್ತು ಹೊಸ ಮೆಂಬರುಗಳನ್ನು ಸೇರಿಸಲು ಕಮಿಟಿ ಮೆಂಬರುಗಳಿಗೆ ರಶೀತಿ ಪುಸ್ತಕಗಳನ್ನು ಕೊಡುವಂತೆ ನಿಶ್ಚಯಿಸಲಾಯಿತು.

ತಾ. 8-4-36

ಪಿ. ಐ. ಬೆಳ್ಯಪ್ಪ,
(ಅಧ್ಯಕ್ಷ.)

ಮರೆನಾಡು ಪ್ರದರ್ಶನ.

ಜಾನುವಾರುಗಳ, ಕೋಳಿಗಳ, ತರಕಾರಿಗಳ ಮತ್ತು ಕೈಕೆಲಸದ ಸಾಮಾನುಗಳ ಪ್ರದರ್ಶನವೊಂದು ತಾ. 5—4—36 ರಲ್ಲಿ ಮರೆನಾಡಿನಲ್ಲಿನ ಬಿರುನಾಣಿ ಶಾಲೆಯ ಬಳಿ ನಾಡು ಕೋಲು ಮಂದಿನಲ್ಲಿ ಮೆ. ಯಂ. ಯಸ್. ಮಂದಣ್ಣನವರ (ಡಿಸ್ಟ್ರಿಕ್ಟು ಮೇಜಿಸ್ಟ್ರೇಟರ.) ಅಧ್ಯಕ್ಷತೆಯಲ್ಲಿ ಜರುಗಿತು.

ಕೊಡಗಿನ ಅನೇಕ ಮುಖ್ಯ ಉದ್ಯೋಗಸ್ಥರೂ ಸ್ಥಳೀಯ ಮಹನೀಯರುಗಳೂ ಮತ್ತು ಮಹಿಳೆಯರೂ ನೆರೆದಿದ್ದರು.

ಸ್ವಾಗತಾಧ್ಯಕ್ಷರಾದ ಮೆ. ಕಾಯಪಂಡ ದೇವಯ್ಯನವರು ನೆರೆದವರಿಗೆಲ್ಲ ವಂದಿಸಿ ಕಿಗ್ಗಟ್ಟುನಾಡಿನ ಅವಶ್ಯಕತೆಗಳನ್ನೆಲ್ಲ ನಿರೂಪಿಸಿ ತಮ್ಮ ಸ್ವಾಗತ ಭಾಷಣವನ್ನು ಮಾಡಿದರು.

ವ್ಯವಸಾಯದ ಸಂಬಂಧದ ಉಪಕರಣಗಳ, ಕೈ ಹೆಣಿಗೆ ಗಳ, ಪುರಾತನ ಕಾಲದ ಅನೇಕ ಉಡಿಗೆಗಳ ಮತ್ತು ಆಯುಧ ಗಳ ಪ್ರದರ್ಶನವು ಶಾಲಾ ಕಟ್ಟಡದಲ್ಲಿ ಸಜ್ಜುಗೊಳಿಸಲ್ಪಟ್ಟಿತ್ತು.

ಪೂರ್ವಾಹ್ನದ ಸಭೆಯಲ್ಲಿ ಮೆ. ಗಳಾದ ಕೋದಂಡ ಸೋಮಣ್ಣನವರು ಮತ್ತು ಅಜ್ಜಮಾಡ ಬೋಪಯ್ಯನವರು ಚಿನ ಕರುಗಳ ಸಾಕುವಿಕೆಯನ್ನು ಕುರಿತು ಮತ್ತು ಕೋಳಿ ಬಾತುಗಳ ಪೋಷಣೆಯನ್ನು ಕುರಿತು ಭಾಷಣಗಳನ್ನಿತ್ತರು. ಅಗ್ರಿಕಲ್ಚರ್ ಡೆಮೊನ್ ಟ್ರೇಟರಾದ ಮೆ. ಕೆ. ಪೊನ್ನಪ್ಪನವರು ವ್ಯವಸಾಯವನ್ನು ಕುರಿತೂ, ಶ್ರೀ ಶಾಂಭವಾನಂದಜೀಯವರು ಜೇನು ಕೈಗಾರಿಕೆಯನ್ನು ಕುರಿತೂ ಬೋಧಪ್ರದವಾದ ಭಾಷಣಗಳನ್ನು ಮಾಡಿದರು.

ಅಪರಾಹ್ನದ ಸಮಾರಂಭದಲ್ಲಿ ಕೊಡಗಿನ ಸಿವಿಲ್ ಸರ್ಜನರಾದ ಆರ್. ಡಿ. ಮೆಕ್ಕೈಯವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಸ್ವಾಗತಾಧ್ಯಕ್ಷರು ಆಗಲೂ ಸಹ ಮಾರೆನಾಡಿನಲ್ಲಿ ಒಂದು ಆಸ್ಪತ್ರೆಯನ್ನು ತೆರೆಯಬೇಕೆಂಬ ಮುಂತಾದ ಕೋರಿಕೆಗಳನ್ನು ವಿಷದೀಕರಿಸಿ ಭಾಷಣವಿತ್ತರು. ಸಿವಿಲ್ ಸರ್ಜನರು ಅದಕ್ಕೆ ಸಹಾನುಭೂತಿಯನ್ನು ತೋರಿ ತಮಗೆ ಸಾಧ್ಯವಾದಷ್ಟು ಮಟ್ಟಿಗೆ ಆ ರಂ ಕೋರಿಕೆಗಳನ್ನು ನೆರವೇರಿಸಲಾಗುವುದೆಂದು ತಮ್ಮ ಭಾಷಣದಲ್ಲಿ ಸ್ಪಷ್ಟಗೊಳಿಸಿದರು. ಅನಂತರ ಮೆ. ಅಜ್ಜಮಾಡ ಕಾಳಯ್ಯನವರು ಆರೋಗ್ಯ ವಿಚಾರವಾಗಿ ಭಾಷಣವನ್ನಿತ್ತರು: ಅನಂತರ ಕೆಲವು ಮಹನೀಯರುಗಳು ಹಲವೊಂದು ವಿಚಾರ ಭಾಷಣಗಳನ್ನಿತ್ತಮೇಲೆ ಪ್ರದರ್ಶಿಸಲ್ಪಟ್ಟ ಉತ್ತಮ ರಾಸುಗಳಿಗೆ, ತರಕಾರಿ ಮತ್ತು ವಸ್ತುಗಳಿಗೆ ಒಳ್ಳೆ ಮಾನಗಳನ್ನು ರಿಜಿಸ್ಟ್ರಾರವರಾದ ಮೆ. ಕೆ. ಚಂಗಪ್ಪನವರು ಹಂಚಿದರು. ಅಂತರ ಸ್ವಾಗತಾಧ್ಯಕ್ಷರು ನೆರೆದವರಿಗೆಲ್ಲರಿಗೂ ವಂದನೆಗಳನ್ನರ್ಪಿಸಿದನಂತರ ಅಂದಿನ ಸಮಾರಂಭವು ಕೊನೆಗೊಂಡಿತು

ವರ್ತಮಾನ ಸಂಗ್ರಹ..

ಒಳದೇಶ.

ಳೆದ ಫೆಬ್ರವರಿ ತಿಂಗಳಲ್ಲಿ ಕೊಡಗಿನಲ್ಲಿ 337 ಜನನಗಳೂ, 236 ಮರಣಗಳೂ ಸಂಭವಿಸಿದವೆಂದು ಪ್ರಕಟವಾಗಿದೆ.

1936ನೇ ಜನವರಿ ಅಂತ್ಯದಲ್ಲಿ ಕೊಡಗಿನ ಸರ್ಕಾರದ ಖರ್ಚು ಆದಾಯಕ್ಕಿಂತ 2-17 ಲಕ್ಷ ರೂಪಾಯಿ ಹೆಚ್ಚಾಗಿತ್ತು.

ಕೊಡಗು ಜಮೀನ್ದಾರರ ಸಂಘದ ಕಾರ್ಯಕಾರಿ ಮಂಡಳಿಯ ವಿಂಟಿಂಗು ಈ ತಾರೀಕು 8ರಲ್ಲಿ ವೀರಾಜಪೇಟೆಯಲ್ಲಿ ನಡೆಯಿತು.

ರೂ. 2500 ಒಳಗಿನ ಸಾಲವಿರುವವರ 'ಇನ್‌ಸಾಲ್ವೆನ್ಸಿ' ಅರ್ಜಿಯನ್ನು ವಿಚಾರಿಸುವ ಅಧಿಕಾರವು ಮಡಿಕೇರಿ ಮುನ್ಸೀಫರಿಗೆ ಕೊಡಲಾಗಿದೆ.

1931ನೇ ಜುಲೈ 15ರ ನಂತರ ನೇಮಿಸಲ್ಪಟ್ಟ ಕೊಡಗಿನ ಗಜೆಟೆಡ್ ಅಲ್ಲದ ಸರ್ಕಾರಿ ಉದ್ಯೋಗಸ್ಥರ ಸಂಬಳದ ಹೊಸ ದರಗಳು ಈ ತಿಂಗಳ ಗಜೆಟಿನಲ್ಲಿ ಪ್ರಕಟವಾಗಿವೆ.

1925ರ ಇಂಡಿಯನ್ ಸಕ್ಸೆಷನ್ ಅಕ್ಟಿನ 10ನೇ ಭಾಗದ ಮೇರೆ ಡಿಸ್ಟ್ರಿಕ್ಟ್ ಕೋರ್ಟಿಗೆ ಇರುವ ಅಧಿಕಾರವು ಮಡಿಕೇರಿ ಮುನ್ಸೀಫ್ ಕೋರ್ಟಿಗೆ ಕೊಡಲಾಗಿದೆ.

ಮೂರ್ನಾಡು ಬ್ಯಾಡ್‌ಮಿಂಟನ್ ಕ್ಲಬ್ಬಿನ ಆಶ್ರಯದಲ್ಲಿ ನಡೆಯುವ ಬ್ಯಾಡ್‌ಮಿಂಟನ್ ಟೂರ್ನಮೆಂಟ್ ಈ ತಾರೀಕು 12ರಲ್ಲಿ ಪ್ರಾರಂಭವಾಗುವುದೆಂದು ತಿಳಿಯಬರುತ್ತದೆ.

ಈ ತಾರೀಕು 5ರಲ್ಲಿ ಮಾರೆನಾಡಿನಲ್ಲಿ ದನ, ತರಕಾರಿ, ಕೈಗಾರಿಕೆ ಸಾಮಾನು ಮುಂತಾದವುಗಳ ಪ್ರದರ್ಶನವು ನಡೆಯಿತು. ಅದರ ವಿವರವು ಇನ್ನೊಂದು ಕಡೆ ಕೊಡಲಾಗಿದೆ.

ಪೊನ್ನಪ್ಪಸಂತೆಯ ದನಗಳ ಪ್ರದರ್ಶನವು ಈ ತಾರೀಕು 23ರಿಂದ 25ರ ವರೆಗೆ ನಡೆಯುವುದರ ಬದಲು ಈ ತಾರೀಕು 30ರಿಂದ ಮೇ ತಾರೀಕು 2ರ ವರೆಗೆ ನಡೆಯುವುದೆಂದು ಇತ್ತ ಲಾಗಿ ತಿಳಿಯಬರುತ್ತದೆ.

ಹಾಲುಗುಂದ ಶಾಲೆಯ 7ನೇ ವಾರ್ಷಿಕೋತ್ಸವವು ಮತ್ತು ಶಾಲೆಯ ಧರ್ಮಾರ್ಥ ಫಂಡಿನ ಜನರಲ್ ವಿಂಟಿಂಗು ಈ ತಾರೀಕು 16ರಲ್ಲಿ ಶಾಲಾ ಡಿಪ್ಯುಟಿ ಇನ್‌ಸ್ಪೆಕ್ಟರಾದ ಮೆ. ಬಿ. ಯಸ್. ಕುಶಾಲಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಲಿಕ್ಕಿದೆ.

ಮೆ. ಯಫ್. ಯಫ್. ಸಿ. ಎಡ್ಮಂಡ್ಸ್‌ರವರು ಇಂಡಿಯನ್ ಸಯನ್ಸ್ ಇನ್‌ಸ್ಟಿಟ್ಯೂಟಿನ ರವ್ಯೂಯಿಂಗ್ ಕಮಿಟಿಯ ಸೆಕ್ರೆಟರಿತನದಿಂದ ಈ ತಾರೀಕು 1ರಲ್ಲಿ ನಿವೃತ್ತರಾದಕಾರಣ ಈ ತಾರೀಕು 2ರಿಂದ ಅವರಿಗೆ 8 ತಿಂಗಳು ರಜೆ ಕೊಡಲಾಗಿದೆ.

ಈ ತಾರೀಕು 27ರಲ್ಲಿ ಡೆಲ್ಲಿಯಲ್ಲಿ ನಡೆಯುವ ಮಾರ್ಕೆಟಿಂಗ್ ಆಫೀಸರುಗಳ ಪರಿಷತ್ತಿಗೆ ಕೊಡಗಿನಿಂದ ಸಹಕಾರಿ ಸಂಘಗಳ ರಿಜಿಸ್ಟ್ರಾರರಾದ ಮೆ. ಕೆ ಜೆ. ಚಂಗಪ್ಪನವರು ಹೋಗುವರೆಂದು ತಿಳಿಯಬರುತ್ತದೆ.

ಕೊಡಗು ಎತ್ಲೆಟಿಕ್ ಎಸೋಸಿಯೇಷನಿನ ಆಶ್ರಯದಲ್ಲಿ ನಡೆಯುವ ಕ್ರಿಕೆಟ್ ಟೂರ್ನಮೆಂಟು ಈ ತಾರೀಕು 17ರಲ್ಲಿ ಮಡಿಕೇರಿ ಕ್ರಿಕೆಟ್ ಮೈದಾನದಲ್ಲಿ ಪ್ರಾರಂಭವಾಗುವ ದೆಂದು ತಿಳಿಯುತ್ತೇವೆ.

ಸಬ್ ಜಡ್ಜರ ಕೋರ್ಟಿನ ಶಿರಸ್ತೆದಾರರಾದ ಮೆ. ಕೀತಿಯಂಡ ಬೆಳ್ಯಪ್ಪನವರು ಒಂದು ತಿಂಗಳ ಮಟ್ಟಿಗೆ ದಕ್ಷಿಣ ಕೊಡಗು ಸುಪರಿಂಟೆಂಡೆಂಟರಾಗಿ ನೇಮಿಸಲ್ಪಟ್ಟಿರುವದರಿಂದ ಮೆ. ಮೂಡರ ತಿಮ್ಮಯ್ಯನವರು ಅವರ ಒದಲು ತಾತ್ಕಾಲಿಕ ಶಿರಸ್ತೆದಾರರಾಗಿ ನೇಮಿಸಲ್ಪಟ್ಟಿರುವರು.

ಬೇಸಿಗೆ ಕಾಲದ ರಜೆಗಾಗಿ ಕೊಡಗಿನ ಸಿವಿಲ್ ಕೋರ್ಟುಗಳೆಲ್ಲವೂ ಏಪ್ರಿಲ್ ತಾರೀಕು 15ರಿಂದ ಮೇ ತಾರೀಕು 26ರ ವರೆಗೂ, ಕೊಡಗಿನ ಜುಡಿಷ್ಯಲ್ ಕಮಿಷನರವರ ಕೋರ್ಟು ಏಪ್ರಿಲ್ ತಾರೀಕು 15ರಿಂದ ಜೂನ್ ತಾರೀಕು 14ರ ವರೆಗೂ (ಎರಡು ದಿನಗಳೂ ಸೇರಿ) ಮುಚ್ಚಲ್ಪಡುವವು. ತುರ್ತಿನ ಕೆಲಸಗಳನ್ನು ಮಾಡಲು ವಿಸರ್ಜಿಡು ಮಾಡಲಾಗುವುದು.

ಟ್ರಿಪಲ್ ಫಂಡ್ಸ್ ಕಮಿಟಿಯಲ್ಲಿ ಮೆ. ಕೆ. ಕೃಷ್ಣಮೂರ್ತಿಯವರ ಮರಣದಿಂದುಂಟಾದ ಖಾಲಿ ಸ್ಥಳಕ್ಕೆ ಒಬ್ಬರನ್ನು ಚುನಾಯಿಸಲು ತಾರೀಕು 8-5-36ರಲ್ಲಿ ಮಡಿಕೇರಿ ಓಂಕಾರೇಶ್ವರ ದೇವಸ್ಥಾನದಲ್ಲಿ ಓಟ್ಸು ತೆಗೆಯಲ್ಪಡುವದೆಂದೂ, ಆ ಮೇದುವಾರರು ಮೂರು ದಿವಸಕ್ಕೆ ಮುಂಚಿತವಾಗಿ ಟಿ. ಫ. ಕಮಿಟಿಯ ಅಧ್ಯಕ್ಷರಿಗೆ ಅರ್ಜಿ ಕಳುಹಿಸಬೇಕೆಂದೂ ಪ್ರಕಟವಾಗಿದೆ.

ಕೊಡಗು ಎತ್ಲೆಟಿಕ್ ಎಸೋಸಿಯೇಶನಿನ ಆಶ್ರಯದಲ್ಲಿ ನಡೆಯುತ್ತಿರುವ ಟೆನ್ನಿಸ್ ಟೂರ್ನಮೆಂಟಿನಲ್ಲಿ ಈ ತಾರೀಕು 9ರಲ್ಲಿ ಆದ ಆಖೈರು ಆಟದಲ್ಲಿ ಹ್ಯಾಂಡಿಕ್ಯಾಪ್ ಸಿಂಗಲ್ಸ್‌ನಲ್ಲಿ ವ್ಯಾಲಿ ಕ್ಲಬ್ಬಿನ ಮೆ. ಶಂಕರನಾರಾಯಣ ರಾವ್‌ರವರು ಪೋಲೋ ಕ್ಲಬ್ಬಿನ ಮೆ. ಪಾಲೇಕಂಡ ಮಂದಣ್ಣನವರನ್ನೂ, ಸಿಂಗಲ್ಸ್‌ನಲ್ಲಿ ವ್ಯಾಲಿ ಕ್ಲಬ್ಬಿನ ಪರ ಮೈಸೂರಿನ ಮೆ. ಕಪನಿಪತಯ್ಯನವರು ಮೈಸೂರಿನ ಮೆ ಸುಬ್ಬರಾವ್‌ನವರನ್ನೂ ಸೋಲಿಸಿ ಕಪ್ಪನ್ನು ಗೆದ್ದರು. ಡಬ್ಬಲ್ಸ್ ಆಖೈರು ಆಟವು ಈ ದಿನ ಸಾಯಂಕಾಲ ವಿಕ್ಟೋರಿಯಾ ಕ್ಲಬ್ಬಿನವರಿಗೂ, ವ್ಯಾಲಿ ಕ್ಲಬ್ಬಿನವರಿಗೂ ನಡೆಯುವುದು.

ಈ ತಾರೀಕು 1ರಿಂದ ಎರಡು ವರ್ಷಗಳ ವರೆಗೆ ಈ ಕೆಳಗಿನ ಮಹನೀಯರು ಗ್ರಾಮ ಪಂಚಾಯಿತರಾಗಿ ಆರಿಸಲ್ಪಟ್ಟಿರುವರು

ಸಿದ್ದಾಪುರ ಗ್ರಾಮದಲ್ಲಿ.

ಮೆ. ಗಳಾದ 1. ಬಿ. ಕಾಳೇಗೌಡ, 2. ಶಿ. ಮುರುಗಪ್ಪ, 3 ವಿ. ಮುದ್ದಪ್ಪ 4. ವಿ. ಒಳೇಗವುಡ, 5 ಶಿ. ಅಪ್ಪಾಜಿಗವುಡ, 6 ಶಿ. ಮುದ್ದಪ್ಪ, 7. ಶಿ. ಸಂಣಪ್ಪ, 8 ಡಿ ರುದ್ರಪ್ಪಶೆಟ್ಟಿ, 9 ಜೆ. ಒಸಲಿಂಗಯ್ಯ ಮತ್ತು 10. ಹೆಚ್. ಹುಚ್ಚೇಗವುಡರು.

ಭಾಗಮಂಡಲದಲ್ಲಿ.

1. ರಾ. ಸಾ. ಬಿ. ಶ್ರೀಪತಿರಾವ್, ಮೆ. ಗಳಾದ 2 ಕೆ. ಶ್ರೀನಿವಾಸಯ್ಯ, 3. ಯನ್. ಪೂವಯ್ಯ, 4. ಯಸ್. ಶ್ರೀನಿವಾಸಯ್ಯ, 5. ಡಿ, ಬೋಜಪ್ಪ, 6. ಸಿದ್ದೀಕ ಅಬ್ದುಲ್‌ಖಾದರ್ ಬಾಚಾಸಾಹೇಬ್, 7. ಡಾಮ್ಪ ಫಕ್ಕಿ ಹಸನ್ ಸಾಹೇಬ್ ಮತ್ತು 8 ಯಸ್‌ಹೆಚ್. ಕೃಷ್ಣಭಟ್ಟರು.

ಹಿಂದೂದೇಶ.

ಏಪ್ರಿಲ್ ತಾ. 1ರಿಂದ ಇಂಡಿಯಾ ದೇಶದಲ್ಲಿಯೇ ಒಂದೂರಿನಿಂದ ಮತ್ತೊಂದೂರಿಗೆ ರವಾನಿಸಬೇಕಾಗಿರುವ ಒಂದು ತೊಲಾ ತೂಕಕ್ಕಿಂತಲೂ ಹೆಚ್ಚಿಲ್ಲದ ಕವರುಗಳಿಗೆ ಒಂದಾಣೆ ಸ್ಟ್ಯಾಂಪು ಮೂತ್ರ ಅಂಟಿಸಿದರೆ ಸಾಕೆಂದೂ, ಒಂದು ತೊಲಾಕ್ಕಿಂತಲೂ ಹೆಚ್ಚಾಗಿರುವ ಪ್ರತಿ ಅರ್ಧ ತೊಲಾ ತೂಕಕ್ಕೂ ಆರು ಕಾಸಿನ ಸ್ಟ್ಯಾಂಪು ಹೆಚ್ಚಾಗಿ ಅಂಟಿಸಬೇಕೆಂದೂ ಪೋಸ್ಟ್ ಆಫೀಸಿನವರು ಪ್ರಕಟಿಸಿರುತ್ತಾರೆ.

ಮೆ. ನಂದೂರಿ ರಾಮಾನುಜಾಚಾರ್ಯರ್ ಎಂಬ ವೈಷ್ಣವನು ಕೆಲವು ದಿನಗಳ ಕೆಳಗೆ ಗುಂಟೂರಿನಲ್ಲಿ ಶ್ರೀಮತಿ ಲೀಲಾವತಿ ಎಂಬ ಹರಿಜನ ಕನ್ನಿಕೆಯನ್ನು ವಿವಾಹವಾಡಿಕೊಂಡನು ಈ ದಂಪತಿಗಳನ್ನು ರಾಜಮಹೇಂದ್ರದಲ್ಲಿ ಆದಿ-ಆಂಧ್ರರು ಊರು ಸುತ್ತಲೂ ಮೆರವಣಿಗೆ ಮಾಡಿ ಅನಂತರ ಕಾಂಗ್ರೆಸ್ ಮಂದಿರದಲ್ಲಿ ಸಭೆ ಸೇರಿದರೆಂದೂ, ಮೆ. ರಾಮಾನುಜಾಚಾರ್ಯರೂ, ಶ್ರೀಮತಿ ಲೀಲಾವತಿಯೂ ಸಭೆಯಲ್ಲಿ ಭಾಷಣ ಮಾಡಿದರೆಂದೂ ತಿಳಿಯಬಂದಿದೆ.

ಬೊಂಬಾಯಿ ಮುನ್ಸಿಪಲ್ ಕಾರ್ಪೊರೇಷನ್ನಿಗೆ (ನಗರ ಸಭೆ) ಮಿ. ಜನ್ನೊದಾಸ್ ಮೇಹತವರು ವಿಶೇಷ ಓಟುಗಳನ್ನು ಪಡೆದು ಅಧ್ಯಕ್ಷರಾಗಿ ಚುನಾವಣೆಯಾಗಿರುತ್ತಾರೆ. ಇವರು ವಕೀಲರು. ವಯಸ್ಸು 52 ವರ್ಷ. ಅನೇಕ ಖಾಸಗಿ ಸಂಸ್ಥೆಗಳ ಮತ್ತು ಕೂಲಿಕಾರರ ಸಂಘಗಳ ಅಧ್ಯಕ್ಷರಾಗಿಯೂ ಇದ್ದಾರೆ. ಇವರು ಸಾರ್ವಭೌಮ ನ್ಯಾಯವಿಧಾಯಕ ಸಭೆಯ ಮೆಂಬರಾಗಿಯೂ, ಇಂಡಿಯನ್ ಕಾಂಗ್ರೆಸ್ ಸಂಸ್ಥೆಯ ಮೆಂಬರಾಗಿಯೂ ಇದ್ದರು.

ಇಂಡಿಯಾ ದೇಶದಲ್ಲಿ ಹಿಂದೆ ಕೆಲವು ಬೈತಾಗಿಗಳು ಹಗ್ಗವನ್ನು ನೇರವಾಗಿ ಕಟ್ಟಿಣದ ಸಲಾಕೆಯಂತೆ ಭೂಮಿಯ ಮೇಲೆ ನಿಲ್ಲಿಸಿ ಒಬ್ಬ ಹುಡುಗನು ಅದರ ಮೇಲೆ ಹತ್ತಿ ಹೋಗಿ ಅದರ ತುದಿಯಲ್ಲಿ ನಿಂತು ವಿವಿಧವಾದ ಸಾಹಸಕಾರ್ಯಗಳನ್ನು, ಮೂಯವಾಗುವುದನ್ನೂ ಪ್ರದರ್ಶಿಸುತ್ತಿದ್ದರೆಂದು ಪ್ರತೀತಿ ಇದೆ. ಈ ಚಮತ್ಕಾರವನ್ನು ಯೂರಾದರೂ ಪ್ರತ್ಯಕ್ಷವಾಗಿ ಪ್ರದರ್ಶಿಸಿದಲ್ಲಿ ಅಂಥವರಿಗೆ 10,000 ರೂಪಾಯಿ ಬಹುಮಾನ ಕೊಡುವುದಾಗಿ ಸಿನಿವೋ ಫಿಲಂ ಕಂಪನಿಯ ಮಿ. ಟಿ. ಗಾನೆಟ್‌ರವರು ಪ್ರಕಟಿಸಿರುತ್ತಾರೆ.

ಕಾನ್‌ಪುರಕ್ಕೆ ಸೇರಿದ ನವಾಫರ್ ಎಂಬಲ್ಲಿ ಪೊಲೀಸಿನವರು ಇಬ್ಬರನ್ನು ದಸ್ತಗಿರಿಮಾಡಿರುತ್ತಾರೆ. ಇವರು ಹೆಣ್ಣು ಮಕ್ಕಳನ್ನಿಟ್ಟು, ಹೆಂಗಸರನ್ನೂ, ವಿಧವೆಯರನ್ನೂ ಅಪಹರಿಸಿಕೊಂಡು ಹೋಗಿ ಅವರನ್ನು ಪಂಜಾಬಿನಲ್ಲಿ ಮಾರುತ್ತಿದ್ದರೆಂದು ಹೇಳಲಾಗಿದೆ ಸಂಯುಕ್ತ ಪ್ರಾಂತ್ಯದ ನಾನಾ ಡಿಸ್ಟ್ರಿಕ್ಟುಗಳಲ್ಲಿ ಇಂಥವರು ಅನೇಕರಿರುವುದಾಗಿಯೂ, ಇದು ವರೆಗೆ ಸುಮಾರು 72 ಮಂದಿ ಹೆಂಗಸರನ್ನು ಅವರುಗಳು ಹೀಗೆಯೇ ಎತ್ತಿಕೊಂಡು ಹೋಗಿ ಪಂಜಾಬಿನಲ್ಲಿ ತಲಾ 1,000 ರೂಪಾಯಿನಂತೆ ಮಾರಿರುತ್ತಾರೆಂದೂ ಹೇಳಲಾಗಿದೆ.

ಕಲ್ಕತ್ತದ ಕಾರ್ಪೊರೇಷನ್ ಸಭೆಯಲ್ಲಿ ಮುಸ್ಲೀಮರಿಗಾಗಿ ಪ್ರತ್ಯೇಕಿಸಿಟ್ಟಿದ್ದ 5 ಸ್ಥಾನಗಳಿಗೆ ಸಾಕಷ್ಟು ನಾಮಿನೇಷನ್‌ಗಳು ಕ್ರಮವರಿತು ಬಾರದೆ ಹೋದ ಕಾರಣ ಅಲ್ಲಿನ ಗವರ್ನ್‌ಮೆಂಟಿನವರು 5 ಮಂದಿ ಮುಸ್ಲೀಮರನ್ನು ಆ ಸ್ಥಾನಗಳಿಗೆ ನಿಯಮನಕೂಡಿಸಿದರು ಈ 5 ಮಂದಿಯಲ್ಲಿ ಬೇಗಂ ಸಕೀನ ಫುತ್ಕಾಕ್ ಸಲಾಮ್ ಮುಯ್ಯೆಡ್‌ಜೋಡ ಎಂ. ಎಲ್.ಬಿ.

ಶ್ರೀ ಸುಬಾಷ್‌ಚಂದ್ರಬೋಸರು ಕ್ಷೇಮ ಮಾಡಲ್ಪಟ್ಟರು.

ಶ್ರೀ. ಸುಬಾಷ್ಚಂದ್ರಬೋಸರನ್ನು ಬೊಂಬಾಯಿಯಲ್ಲಿ ಈ ತಾ. 8 ನೇ ಬುಧವಾರ 10-30ಕ್ಕೆ ಎಪೊಲೋ ಬಾಂದರಿನಲ್ಲಿ 1818 ರ ವಿಶೇಷ ಖಾನೂನಿನ III ನೇ ರೆಗ್ಯುಲೇಶನ್ ಪ್ರಕಾರ ದಸ್ತಗಿರಿ ಮಾಡಲ್ಪಟ್ಟರು.

ಇವರು ತಾ. 8ರಲ್ಲಿ ಬೊಂಬಾಯಿಗೆ ತಲಪುವರೆಂದು ಸರಕಾರದವರಿಗೆ ಮೊದಲೇ ತಿಳಿದಿತ್ತು. ಇವರನ್ನು ಪೋರ್ಟ್‌ಸೆಡ್ ಬಂದರಡಲ್ಲಿಯೇ ದಸ್ತಗಿರಿ ಮಾಡುವ ಹಂಚಿಕೆಗಳಾಗಿತ್ತಂತೆ. ಆದರೆ ಹಡಗದ ಕೆಪ್ಪನ್ನರು ಅನಕ್ಕೆ ಸಮ್ಮತಿಸಲಿಲ್ಲ.

ಬೋಸರನ್ನು ಆ ಸಮಯದಲ್ಲಿ ಎದುರುಗೊಳ್ಳಲು ಸಾವಿರಾರು ಮಂದಿ ಬಂದು ಬಂದರಿದಲ್ಲಿ ಕಾದಿದ್ದರು ಅವರಿಗೆ ಪುಷ್ಪಾಹಾರಗಳಿಂದ ಯಥೇಚ್ಛವಾಗಿ ಸನ್ಮಾನಿಸಿದರು. ಆಗ ಅವರು 'ಭಾರತ ಸ್ವಾತಂತ್ರ್ಯ ಪತಾಕೆಯನ್ನು ಸದಾ ಹಾರಾಡಿಸಿರಿ' ಎಂದು ಜನತೆಯನ್ನು ಹುರಿದುಂಬಿಸಿದರು.

ಶ್ರೀ ಬೋಸರನ್ನು ಆರ್ಥರ್ ರೋಡು ಲಾಕಪ್ಪಿಗೆ ತಕ್ಷಣವೇ ಒಯ್ದರು.

ಸುಬಾಷರ ದೇಹಾರೋಗ್ಯವನ್ನು ಕುರಿತು ಡಾಕ್ಟರರ ಅಭಿಪ್ರಾಯ

ವಿಯೆನದ ಡಾಕ್ಟರ್ ರುಡಾಲ್ಫ್ ಡೆನೆಲ್‌ರವರು ಇಂಡಿಯಾ ಸರಕಾರಕ್ಕೆ ಶ್ರೀ. ಬೋಸರ ದೇಹಸ್ಥಿತಿಯನ್ನು ಕುರಿತು ಈ ಪ್ರಕಾರ ಪತ್ರ ಬರೆದಿರುವರು ಅದರ ನಕಲೊಂದು ಎಸೆಂಬ್ಲಿ ಸಭಾಸದರಾದ ಶ್ರೀ ಅಬ್ಬಿಗೌಡನ ದತ್ತರವರಿಗೆ ತಲಪಿದೆ

'1935 ನೇ ಏಪ್ರಿಲ್ ಮತ್ತು ಮೇಯಲ್ಲಿ ಶ್ರೀ ಸುಬಾಷ್ಚಂದ್ರಬೋಸರಿಗೆ ಹೆಚ್ಚಿಯಲ್ಲಿ ಶಸ್ತ್ರಕ್ರಿಯೆ ನಡೆಸಿದ್ದೇನೆ. ಆ ದ್ದರಿಂದ ಅವರ ದೇಹಸ್ಥಿತಿಯು ಕೊಂಚ ಉತ್ತಮವಾಗಿರುವ ದಾದರೂ ಇನ್ನು ತೃಪ್ತಿಕರವಾಗಿ ಆರೋಗ್ಯಸ್ಥಿತಿಯನ್ನು ಹೊಂದಿರುವದಿಲ್ಲ. ಅವರು ಇನ್ನೂ ಒಂದು ವರ್ಷದ ಮಟ್ಟಿಗೆ ಇಲ್ಲಿದ್ದು ಚಿಕಿತ್ಸೆ ಹೊಂದಬೇಕಾಗಿತ್ತು. ಆದರೆ ಅವರು ಸ್ವದೇಶಕ್ಕೆ ಹಿಂದುರುಗಲು ಉದ್ಯುಕ್ತರಾಗಿರುವರು. ಅವರು ಆಹಾರ ವಿಚಾರಗಳಲ್ಲಿ ಬಹಳ ಜಾಗರೂಕರಾಗಿರಬೇಕು. ಅಲ್ಲದೆ ಹೆಚ್ಚು ತೊಂದರೆ ಮತ್ತು ಮನಸ್ಸಿಗೆ ಅಶಾಂತಿಯನ್ನು ತೆಗೆದುಕೊಳ್ಳಬಾರದು. ಅವರು ಹಿಂದೂ ದೇಶಕ್ಕೆ ತೆರಳಿದಲ್ಲಿ ಕೈದು ಮಾಡಲ್ಪಡುವರೆಂದು ನನಗೆ ತಿಳಿಯಬಂದಿರುವದರಿಂದ ನನಗೆ ಅವರ ದೇಹಸ್ಥಿತಿಯನ್ನು ಕುರಿತು ಬಹಳ ಕಳವಳವುಂಟಾಗಿದೆ. ಅವರಿಗೆ ಬಂಧಿಕಾನೆಯಲ್ಲಿ ನಾನು ಹೇಳಿದಂತೆ ಎಚ್ಚರಿಕೆ ತೆಗೆಯಲು ಅವಕಾಶಸೌರೆಯಲಿಕ್ಕಿಲ್ಲ. ಅವರಿಗೆ ಈ ವೊಣಲು ಹೃದ್ರೋಗದ ಕೆಲವು ಕುರುಹುಗಳಿತ್ತು. ಆದ್ದರಿಂದ ನಾನು ಒಬ್ಬ ವೈದ್ಯನಾಗಿರುವದರಿಂದ ಅವರನ್ನು ಸಂಬಂಧಿಸಿ ಸರಕಾರವು ಈ ವಿಷಯಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕು ಎಂದು ಎಚ್ಚರಿಕೆ ಕೊಡುವದು ನನ್ನ ಕರ್ತವ್ಯ.

ಎಲ್. ರವರು ಒಬ್ಬರು. ಕಲ್ಕತ್ತ ಕಾರ್ಪೊರೇಷನ್ ಸಭೆಯಲ್ಲಿ ಕೌನ್ಸಿಲರಾದ ಮೊದಲನೇ ಮುಸ್ಲೀಮ್ ಮಹಿಳೆಯು ಬೇಗಂರವರೇ ಎಂದು ಭಾವಿಸಲಾಗಿದೆ.

ಕಲ್ಕತ್ತಾ ಪಟ್ಟಣದಲ್ಲಿ ಜನರಿಗೆ ನೀರು ಸರಬರಾಯಿ ಮಾಡಿಕೊಡಲು ಮುನ್ಸಿಪಾಲಿಟಿಯವರು ಹಾಕಿಸಿರುವ ನೀರಿನ ಕೊಳಾಯಿಗಳ ಪೈಕಿ ಒಂದರಲ್ಲಿ ನೀರು ಸೋರಿ ಭೂಮಿಯಲ್ಲಿ ವಸ್ತು ಏರಿದುದರಿಂದ ಸವಿೂಪದಲ್ಲಿದ್ದ ಒಬ್ಬರ ಮನೆಯು ಕುಸಿದು ಬಿದ್ದಿತು. ಮನೆಯ ಮಾಲೀಕನು ಮುನ್ಸಿಪಾಲಿಟಿಯ ಮೇಲೆ 4,000 ರೂಪಾಯಿಗೆ ದಾವಾ ಮಾಡಿದನು. ಅಲಿಪೂರಿನ ಫರ್ಸ್ಟ್ ಸಬಾರ್ಡಿನೇಟ್ ಜಡ್ಜಿಯವರು ವಿಚಾರಣೆ ನಡಿಸಿ ಮುನ್ಸಿಪಾಲಿಟಿಯವರಿಂದ ಫಿರ್ಯಾದಿಗೆ 2,235 ರೂಪಾಯನ್ನೂ ಕೋರ್ಟ್ ಖರ್ಚನ್ನೂ ಕೊಡಿಸಿದರು.

ಭರತ ಖಂಡದ ಪ್ರಖ್ಯಾತ ಕವಿಯೂ ರವೀಂದ್ರನಾಥ ಟಾಗೂರ್‌ರವರು ವಿಶ್ವಭಾರತಿ ಎಂಬ ಅಭಿದಾನದಿಂದ ಸಕಲ ಕಲಾ ಶಾಲೆಯೊಂದನ್ನು ಸ್ಥಾಪಿಸಿ ಅನೇಕ ದಿನಗಳಿಂದಲೂ ನಡಿಸಿಕೊಂಡು ಬರುತ್ತಿದ್ದಾರೆ. ಇದರ ಖರ್ಚು ವೆಚ್ಚಗಳಿಗಾಗಿ ಸರ್ಕಾರದವರೂ, ಖಾಸಗಿ ದೊಡ್ಡ ಮನುಷ್ಯರುಗಳೂ, ಧಾರ್ಮಿಕರೂ ಹಣ ಒದಗಿಸಿಕೊಡುತ್ತಲಿದ್ದಾರೆ. ಆರ್ಥಿಕ ದುರ್ದೆಸೆಯಿಂದ ಈಚಿಗೆ ಆ ಶಾಲೆಗೆ ದೊರಕುತ್ತಿದ್ದ ಹಲವು ಗ್ರಾಂಟುಗಳು ನಿಂತುಹೋದವು. ಎಂದಿನಂತೆ ಕಾರ್ಯ ನಡಿಸಲು 60,000 ರೂಪಾಯಿನ ವರೆಗೆ ಸಾಲವಾಯಿತು. ಈ ಸಾಲ ತೀರಿಸುವ ಉದ್ದೇಶದಿಂದ ಡಾ. ಟಾಗೂರ್‌ರವರು ತಮ್ಮ ಕೆಲವು ಶಿಷ್ಯರುಗಳಿಂದ ಕೂಡಿ ತಾವು ಬರೆದ ನಾಟಕಗಳನ್ನು ಅವರಿಂದ ಊರೂರುಗಳಲ್ಲಿ ಅಭಿನಯಿಸಿ ದ್ರವ್ಯ ಸಂಪಾದನೆ ಮಾಡಲು ಪ್ರಾರಂಭಿಸಿದರು. ಯೂರೋ ಧರ್ಮಾತ್ಮರು ಅವರಿಗೆ ಸಾಲ ತೀರಿಸಿಕೊಳ್ಳಲು 60,000 ರೂಪಾಯಿನ ಹುಂಡಿಯನ್ನು ಕಳುಹಿಸಿಕೊಟ್ಟಿರುತ್ತಾರೆ. ಹಣ ಕಳುಹಿಸಿಕೊಟ್ಟಿರುವವರು ತಮ್ಮ ಹೆಸರನ್ನು ತಿಳಿಸಿಲ್ಲ. ವೃದ್ಧಾಪ್ಯದಲ್ಲಿ ತಮಗೊದಗಿದ್ದ ಕಷ್ಟದಿಂದ ಪಾರುಮಾಡಿದ ಆ ಧಾರ್ಮಿಕರನ್ನು ಡಾ ಟಾಗೂರ್‌ರವರು ಕೃತಜ್ಞತಾಪೂರ್ವಕವಾಗಿ ವಂದಿಸಿರುತ್ತಾರೆ.

ಯುದ್ಧ ವಾರ್ತೆ.

ಏಪ್ರಿಲ್ ತಾ. 2.

ಇತ್ಯೋಪಿಯನರು ತಿರುಗಿ ಬಿದ್ದರು.

ಅಂಬ ಅಲಗಿಯ ಬಳಿ, ಮುಂದುವರಿಯುತ್ತಿದ್ದ ಇಟಲಿ ಸೈನ್ಯದ ಮೇಲೆ ಅಬಿಸೀನಿಯರು ಹಟತ್ಕಾಗಿ ಬಿದ್ದರು. ಭಯಂಕರ ಕಾಳಗವು ಸಂಭವಿಸಿತು. ಅದರಲ್ಲಿ 36 ಇಟಲಿ ಅಫೀಸರುಗಳೂ, 500 ಬಿಳೇ ಸೈನಿಕರೂ ಮತ್ತು 2000 ಇರಿಟ್ರಿಯಾ ಸೈನಿಕರೂ ಮಡಿದರು. ಅಬಿಸೀನಿಯಾ ಸೈನ್ಯದಲ್ಲಿ 887 ಮಂದಿ ಮಡಿದರಲ್ಲದೆ 345 ಸೈನಿಗರಿಗೆ ಜಖಂ ಆಗಿರುತ್ತದೆ. ಇಟಲಿಯವರ ಫಿರಂಗಿ ವಿಷವಾಯು ಮುಂತಾದವುಗಳನ್ನು ಅಬಿಸೀನಿಯರು ದಿಟ್ಟತನದಿಂದ ಎದುರಿಸಿದರು.

ಏಪ್ರಿಲ್ ತಾ. 3.

ವಿಷಗಾಳಿ ಪ್ರಯೋಗ.

ಇಟಲಿಯವರು ಕೊರೆಂ ಬಳಿ ವಿಷಗಾಳಿ ಪ್ರಯೋಗಿಸುತ್ತಿರುವರು. ಈ ಸಂಬಂಧ 2500 ಮಂದಿ ಪರಿಗೆ ವಿಷಗಾಳಿಯ ಸೇವನೆಯಿಂದುಂಟಾದ ದೇಹಕ್ಷೀಣತೆಗಾಗಿ ಚಿಕಿತ್ಸೆ ನಡೆಸಿರುವರೆಂದು ಡಾ ಮೆಲ್ಲಿಯವರು ಪ್ರಕಟಿಸಿರುವರು.

ಏಪ್ರಿಲ್ ತಾ. 4.

ಕೊರೆಂ ಇಟಲಿಯವರ ಕೈವಶವಾಯಿತು.

ಕೊರೆಂ ಕಟ್ಟ ಕಡೆಗೆ ಸಂಪೂರ್ಣವಾಗಿ ಇಟಲಿಯವರ ಅಧೀನವಾಯಿತ್ತೆಂದು ತಿಳಿಯಬಂದಿದೆ. ಇಟಲಿಯನರು ಅಲ್ಲಿ ಸುತ್ತು ಮುತ್ತ ಚದರಿರುವ ಅಬಿಸೀನಿಯ ಸೈನಿಕರನ್ನು ಹತ್ಯೆಗೈಯ್ಯುತ್ತಿರುವರಂತೆ.

ಇಟಲಿಯ ಸೈನ್ಯ ತ್ಸಾನಸರೋವರಕ್ಕೆ ತಲಪಿತು.

ಇಟಲಿಯ ಸೈನ್ಯದ ಒಂದು ವಿಭಾಗವು ತ್ಸಾನಸರೋವರದ ವರೆಗೆ ತಲಪಿದ್ದಾಗಿ ತಿಳಿಯಬಂದಿದೆ.

ಯುವಕರಿಗೆ ಮುಸೋಲಿನಿಯರ ಭಾಷಣ

16 ರಿಂದ 18 ವಯಸ್ಸಿನೊಳಗಿರುವ ಯುವಕ ಫೇಸಿಸ್ಟ್ ಬಿಟಾಲಿಯನ್‌ರವರಿಗೆ ಮುಸೋಲಿನಿಯವರು ತಾ. 4ರಲ್ಲಿ ರಣೋತ್ಸಾಹದ ಭಾಷಣವನ್ನು ಮಾಡಿದರು. 'ಹಿರಿಯರು ತಮ್ಮ ಸುದೃಢ ಮುಷ್ಟಿಗಳಿಂದ ಜಮುಲಕ್ಕೆ ಮೆನ್ನು ಹಿಡಿಯುಲೆಸ್ಸಿನವಾಗ 5 ಮಿಲಿಯ ಸಂಖ್ಯೆಯಲ್ಲಿರುವ ಇಟಲಿಯ ನವಯುವಕ ವೀರರಾದ ನೀವು ಸಹ ನಿಮ್ಮ ದೇಶದ ಕಲ್ಯಾಣಕ್ಕೆ ಹೆಣಗಾಡಬೇಕೆಂದು ಹುರಿದುಂಬಿಸಿದರು.'

ಲಾಭಕರವಾದದ್ದು ಯಾವುದು?



501 ಸೋಪಿನ ಒಂದು ಇಡೀ ಸಾಬೂನೋ ಯಾ ಅರ್ಧ ನೀರು ಮತ್ತು ಅರ್ಧ ಸಾಯೊನಿರುವ ಮತ್ತಿತರ ಸಾಬೂನುಗಳೋ?

ಅನೇಕ ಸುಲಭ ಕ್ರಯದ ಸಾಬೂನುಗಳಲ್ಲಿ ಅರ್ಧಾಂಶವು ನೀರಾಗಿರುತ್ತೆ. ಆದ್ದರಿಂದಲೇ ಅವು ಪಕ್ಕನೆ ನೀರಾಗುವುದು. 501 ಸಾಬೂನು ಅತೀ ಸುಲಭ ಖರ್ಚಿನದು. ಯಾಕೆಂದರೆ ಅದು ಒಳ್ಳೇ ಗಟ್ಟಿ ಸಾಬೂನು. ಅದರಲ್ಲಿ ಅವಶ್ಯಕವಾದಷ್ಟೇ ನೀರಿನ ಅಂಶವಿರುವುದು.

ವೆಚ್ಚ ಕಡಿಮೆ. ವಸ್ತ್ರ ಬಾಳಿಕೆ. ಶ್ರಮ ಅತೀ ಕಡಮೆ!

ಟಾಮ್‌ಕೋ ವೂರಾಟದ ಮಳಿಗೆ, TOMCO ೧, ಸೆಂಟ್ರಲ್ ಸ್ಟ್ರೀಟ್, ಬೆಂಗಳೂರು ದಂಡು.

501 Soap

ತಯಾರಿಸುವವರು—ತಾತಾ ಆಯಿಲ್ ಮಿಲ್, ಕಂಪೆನಿ, ಲಿಮಿಟೆಡ್, ಬೊಂಬಾಯಿ, ಮತ್ತು ತಾತಾಪುರ.

52—46. ಕೊಡಗಿನ ಡಿಸ್ಟ್ರಿಬ್ಯೂಟರ್—ಬಿ. ಎಸ್. ಸುಬ್ಬಣ್ಣ, ಸಂಪಾಜೆಪೇಟೆ, ಮೈಸೂರು.

ಪ್ರಸಿದ್ಧ ಔಷಧಗಳು.

ಮಲೇರಿಯಾಕ್ಕೆ ಒಂದೇ ಸಿದ್ಧೌಷಧ.

ಶುದ್ಧವಾದ ಹಿಂದೂಸ್ಥಾನದ ಮೂಲಿಕೆಗಳಿಂದ ತಯಾರಾದದ್ದು.

ಕ್ವಿನಿನ್ನನ್ನು ಯಾವ ರೂಪದಲ್ಲೂ ಸೇರಿಸಿಲ್ಲ.

"ನವರತ್ನ ಅಲ್ಮಾರಿಯಾ"

ಹಿಂದೂದೇಶದ ಔಷಧಗಳ ವಿಚಾರದಲ್ಲಿ ಶ್ರೇಷ್ಠತೆಯನ್ನು ಪಡೆದ ಡಾ. ಕೆ. ಯಂ. ನಾಡ್ಕರ್ಣಿ ಮತ್ತು ಡಾ. ಕೆ. ಸಿ. ಬೋಸ್‌ರವರ ಗ್ರಂಥಗಳಿಗನುಗುಣವಾಗಿ ಅತೀ ಪರಿಣಾಮಕಾರಕ ಔಷಧಗಳ ಸಂಯೋಜನೆಯಿಂದ ತಯಾರಿಸಲ್ಪಟ್ಟ ಈ ಔಷಧವು ಹೆಚ್ಚು ಫಲಕಾರಿಯಾಗಿರುವದು.

ಇದರಲ್ಲಿರುವ ಔಷಧಗಳು.

1. Andrographis Paniculate
2. Cocculas Cordifolius
3. Berriberies Aristata
4. Vernonis Cinerarea
5. Evolvulas Alsinoides
6. Dashmoola
7. Aconitum Heterophylum
8. Alstonia Scholaris

ಮಲೇರಿಯಾಕ್ಕೆ ಅತ್ಯುತ್ತಮ ಔಷಧಿ. ಕ್ವಿನಿನನ್ನು ಯಾವ ವಿಧದಲ್ಲೂ ಸೇರಿಸದೆ ಯಾವ ಬಾಬಿನಲ್ಲೂ ಹಾನಿಕರವಾಗದ ಸಂಜೀವನಿ. ಇದನ್ನು ಎಷ್ಟು ಸೇವಿಸಿದರೂ ಕ್ವಿನೀನ್ ಸೇವನೆಯಿಂದ ಉಂಟಾಗಬಹುದಾದ ಮಹಾ ಹಾನಿಗಳ ಭಯವೇ ಇಲ್ಲ. ಒಮ್ಮೆ ಪರೀಕ್ಷಿಸಿದಲ್ಲಿ ಮತ್ತೆ ಬಿಡಲಾರಿರಿ.

ತಯಾರಿಸುವವರು:—**ದಿ ನವರತ್ನ ಫಾರ್ಮಸಿ,**
ಪೋ. ಬಾ. ನಂಬರು 68, ಕೊಚಿನ್.

ಸ್ಪೆಷಿಕ್ಸ್—ಎ. ಎಸ್. ಮೂಚಯ್ಯ, ಬಟ್ಟೆ ವ್ಯಾಪಾರಿ, ಸುಂಟಿಕೊಪ್ಪ.
ಏಜೆಂಟ್—ವಿ. ಬಿ. ಕಾಮತ್, ಮೆಹದೇವಪೇಟೆ, ಮಡಿಕೇರಿ.

ನವರತ್ನ ಫಾರ್ಮಸಿ, ಕೊಚಿನ್.

ವಿಜ್ಞಾಪನೆ.

ಪೊನ್ನಂಪೇಟೆ—ಶ್ರೀಮಂಗಲನಾಡುಗಳ ಜನ್ಮ ಓಟರುಗಳಲ್ಲಿ ಪಿ. ಜಿ. ಮುದ್ದಮ್ಮಯ್ಯನ ವಿಜ್ಞಾಪನೆ.

ಈಗ ತಾನೇ ನಮ್ಮ ಕೌನ್ಸಿಲ್‌ನಲ್ಲಿ ಖಾಲಿ ಬಿದ್ದಿರುವ ಒಂದು ಸ್ಥಳಕ್ಕೆ ನಮ್ಮ ತಾಲೋಕಿನ ಪರವಾಗಿ ನಾನೊಬ್ಬ ಉಮೇದ್ವಾರನಾಗಿರುತ್ತೇನೆ. ಸದರಿ ಸ್ಥಳಕ್ಕೆ ತಾವುಗಳೆಲ್ಲರು ತಾರೀಕು 15—5—36 ನೇ ಶುಕ್ರವಾರ ದಿನ ನಿಮ್ಮ ನಿಮ್ಮ ಪೋಲಿಂಗ್ ಸ್ಟೇಶನಿಗೆ ದಯಮಾಡಿಸಿ ಒನ್ಮನಸ್ಸಿನಿಂದ ತಮ್ಮ ದೊಂದು ಓಟನ್ನು ನನಗೆ ಕೊಟ್ಟು ನನ್ನನ್ನು ಜಯಶೀಲನಾಗಿ ಮಾಡಿ ತಮ್ಮೆಲ್ಲರ ಸೇವೆ ಮಾಡಲು ಅನುಕೂಲಪಡಿಸಿಕೊಡಬೇಕಾಗಿ ವಿನಯಪೂರ್ವಕವಾಗಿ ಬೇಡಿಕೊಳ್ತೇನೆ.

ಪೊನ್ನಂಪೇಟೆ, 4—4—36. ಇತಿ ತಮ್ಮ ಸೇವಕ, **ಪಿ. ಜಿ ಮುದ್ದಮ್ಮಯ್ಯ.**

ನೋಟೀಸು.

ಬರುವ ಮೇ ತಿಂಗಳ 1 ರ ಮೇಲೆ 15 ರೊಳಗೆ ವೀರಾಜಪೇಟೆಯಲ್ಲಿ ನಡಿಸಲಿಕ್ಕಿರುವ ಕೊಡಗು ಜನೋದ್ಧಾರರ ಸಂಘದ ವಾರ್ಷಿಕ ಮಹಾ ಸಭೆಯ ಸ್ವಾಗತ ಏರ್ಪಾಡುಗಳನ್ನು ಮಾಡಲು ಒಂದು ಸ್ವಾಗತ ಕಮಿಟಿಯನ್ನು ಆಸುವ ಬಗ್ಗೆ ಈ ತಾ. 15 ನೇ ಬುಧವಾರ ಮಧ್ಯಾಹ್ನ 1 ಗಂಟೆ ವೀರಾಜಪೇಟೆ ಏಕ್ಸೋರಿಯಾ ಕ್ಲಬ್ಬಿನ ಎದುರುಗಡೆ ಮೈದಾನವಲ್ಲಿ ಒಂದು ಸಾರ್ವಜನಿಕ ಸಭೆ ಸೇರುವುದು. ಸರ್ವರೂ ದಯವಿಟ್ಟು ಬರಬೇಕಾಗಿ ಕೋರಿಕೆ.

ಜನೋದ್ಧಾರರ ಸಂಘ. ತಾ. 9-4-36 **ಐ. ಪಿ. ಕಾರ್ಯಪ್ಪ,** (ಜನರಲ್ ಸೆಕ್ರೆಟರಿ.)

FOR SALE.

80 Acres of good Jungle fit for orange, or coffee cultivation and 330 Batties of wet-land near Gattadalla & Silpi estates in Karadigode Village. Intending purchasers may write to the below address.

ಮಾರಾಟಕ್ಕಿದೆ.

ಸಿದ್ದಾಪುರದ ಕರಡಿಗೋಡು ಗ್ರಾಮದಲ್ಲಿ ಗಟ್ಟದಳ್ಳ ಮತ್ತು ಸಿಲ್ಪಿ ತೋಟದ 80 ಏಕರು ಕಾಡು ಮತ್ತು 330 ಬಟ್ಟಿ ಸಾಗುವಳಿ ಗದ್ದೆ ಮಾರಾಟಕ್ಕಿದೆ. ಕಾಡು ಕಾಫಿ, ಕಿತ್ತಳೆ ವ್ಯವಸಾಯಕ್ಕೆ ಬಹಳ ಉತ್ತಮವಾಗಿದೆ. ಗದ್ದೆ ಮೇಲ್ಗಡೆ ಕೆರೆಯಿದೆ. ಸದಾ ನೀರಾವರಿ. ಖರೀದಾರರು ಒಡನೆ ಈ ವಿಳಾಸದಾರರಲ್ಲಿ ಪತ್ರದ್ವಾರ ಯಾ ಖುದ್ದಾಗಿ ತಮ್ಮ ಇರಾದೆ ತಿಳಿಸಬಹುದು.

4—1 **ಕೆ. ಕೆ. ನಾಜುಂಡ,** ಕರಡಿಗೋಡು ಎಸ್ಟೇಟ್, ಸಿದ್ದಾಪುರ, ಕೊಡಗು.

ESTATE KUMBLIES.

Wholesale Dealers. Moderate prices,

We suppiy good and fresh Kumblies direct from the manufacturers in wholesale and cheap rates avoiding the middleman's profits and commission Please place a trial order and compare the favourable rates All orders will be promptly delivered at the Estates at cost price.

Please apply to—

Messrs. G. NAGAPPA,
Kumbly Merchants & Dealers in Rugs and Carpets,
Chikpet,
4—1 Bangalore City.

ಜಪಾನಿನಲ್ಲಿ ಗಲಭೆ.

ಜಪಾನ್ ರಾಷ್ಟ್ರವು ಪೂರ್ವದಲ್ಲಿ ದಿನೇ ದಿನೇ ಬಹಳ ಪ್ರಾಬಲ್ಯವನ್ನು ಹೊಂದುತ್ತಿದೆ. ಹಲವು ವರ್ಷಗಳ ಹಿಂದೆ 3–4 ದ್ವೀಪಗಳನ್ನೊಳಗೊಂಡಿದ್ದ ಜಪಾನು ಈಗ ವಿಷ್ಯಾಖಂಡದ ಕೆಲ ಭಾಗಗಳ ಮೇಲೆ ತನ್ನ ಆದಿಪತ್ಯವನ್ನು ನೆಲೆಗೊಳಿಸಿದೆ. ಶಕ್ತಿಶಾಲಿಗಳಾದ ಯೂರೋಪಿಯನ್ ರಾಷ್ಟ್ರಗಳು ಆರ್ಥಿಕ ಮುಗ್ಗಟ್ಟಿನಿಂದ ಬಸವಳಿಯುತ್ತಿರಲು ಅದು ಫಕ್ಕನೆ ಚೀನದ ಒಂದು ಪ್ರಾಂತ್ಯವಾದ ಮಂಚೂರಿಯದ ಮೇಲೆ ಬಿದ್ದು ಅದನ್ನು ವಶಪಡಿಸಿತು. ಅಲ್ಲಿ ಚೀನದ ಪದಚ್ಯುತನಾದ ಚಕ್ರವರ್ತಿಯನ್ನು ಪಟ್ಟಕ್ಕೇರಿಸಿ ಮಂಚೂರಿಯವನ್ನು ಮಂಚುಕುವೊ ಎಂಬ ಸ್ವತಂತ್ರ ರಾಷ್ಟ್ರವಾಗಿ ಏರ್ಪಡಿಸಿರುವರು. ಆದರೆ ಇದು ಹೆಸರಿಗೆ ಮಾತ್ರ. ನಿಜವಾದ ಸೂತ್ರಧಾರನು ಜಪಾನ್. ಕೆಲವು ತಿಂಗಳ ಹಿಂದೆ ಇತೋಪಿಯನ್ ಯುದ್ಧದ ಸಮಸ್ಯೆಯು ಯೂರೋಪಿನ ಪ್ರಬಲ ರಾಷ್ಟ್ರಗಳನ್ನು ಕಾಡುತ್ತಿರಲು ಜಪಾನು ಉತ್ತರ ಚೀನವನ್ನು ವಶಪಡಿಸಿಕೊಂಡಿತು. ಜಪಾನನ್ನ ಸಾಮ್ರಾಜ್ಯ ವಿಸ್ತಾರದ ಹೆದ್ದಾರಿಯಲ್ಲಿ ಕೊಡೊಯ್ಯಲು ಮೂಲ ಕಾರಣ ಜಪಾನಿಯರ ಯುದ್ಧನೀತಿ. ಸಾಮ್ರಾಜ್ಯ ವಿಸ್ತಾರಕ್ಕೆ ಯುದ್ಧ. ಸೇನಾನಿಗಳ ಮತ್ತು ಮುಖಂಡರ ಪ್ರಭಾವವು ಸರ್ಕಾರದ ಮೇಲೆ ಬಹಳವಾಗಿತ್ತು.

ಈ ವರ್ಷ ಫೆಬ್ರವರಿ 22ರಲ್ಲಿ ಜಪಾನಿನ ನ್ಯಾಯಪ್ರಧಾಯಕ ಸಭೆಗೆ ಚುನಾವಣೆಯೊಗಲು ಯತ್ನಿಸಿದ್ದ ನೀತಿಯ ಪೋಷಕರಿಗೆ ಹೆಚ್ಚಿನ ಸ್ಥಾನಗಳು ದೊರೆಯಲಿಲ್ಲ. ಅವರ ವಿರೋಧಿಗಳೇ ಬಹುಮತದವರಾದರು. ಸೈನ್ಯವು ರಾಜಕೀಯ ವಿಷಯಗಳಲ್ಲಿ ಪ್ರವೇಶಿಸಬಾರದೆಂದೂ ಅವರ ಅಭಿಪ್ರಾಯವಿದ್ದಿತು ಒಕಾಡನೆಂಬವನು ಪ್ರಧಾನ ಮಂತ್ರಿಯಾದನು. ತಕಾಹಾಶಿ ಎಂಬವನು ಅರ್ಥ ಸಚಿವನಾದನು. ಸೈನಿಕ ಶಕ್ತಿಯನ್ನು ಮಿತಿಮೀರಿ ಹೆಚ್ಚಿಸುವುದು ಇವರ ಮನಸ್ಸಿಗೆ ಹಿತವಿದ್ದಿಲ್ಲ. ಆದ್ದರಿಂದ ಪರರಾಷ್ಟ್ರಗಳೊಡನೆ ಮೈತ್ರಿಯಿಂದಿದ್ದು ತಮ್ಮ ರಾಷ್ಟ್ರದ ಸಂಪತ್ತನ್ನು ಹೆಚ್ಚಿಸುವ ವಿಧಾನವನ್ನು ಕೈಕೊಳ್ಳಬೇಕೆಂದಿದ್ದರು: ಮುಂಚಿನ ಸರ್ಕಾರದ ಯುದ್ಧ ನೀತಿಯನ್ನು ತೊರೆಯಲುದ್ಯುಕ್ತರಾದ ಮಂತ್ರಿಗಳನ್ನು ಕಂಡು ಸೈನ್ಯದ ಕೆಲವು ತರುಣ ಅಧಿಕಾರಿಗಳಿಗೆ ಬಹಳ ಸಿಟ್ಟುಂಟಾಯಿತು.

ಜಪಾನಿನಲ್ಲಿ ಇತರ ರಾಷ್ಟ್ರಗಳಲ್ಲಿದ್ದಂತೆ ಸೈನ್ಯವು ಸರ್ಕಾರದ ವಶದಲ್ಲಿರದೆ ಚಕ್ರವರ್ತಿಯ ಕೈಕೆಳಗಿದೆ. ಚಕ್ರವರ್ತಿಯು ದೇವಾಂಶ ಸಂಭೂತನಾದುದರಿಂದ ಅತನ ಅಧಿಕಾರವನ್ನು ಕಡಿಮೆ ಮಾಡುವುದು ಅಥವಾ ಅದರ ಕುರಿತು ಚರ್ಚಿಸುವುದು ಪಾಪಕರವೆಂದು ಎಣಿಸಲ್ಪಡುತ್ತದೆ. ನಾಲ್ಕು ದಿನಗಳ ನಂತರ ರಾಜಧಾನಿಯಾದ ಟೊಕಿಯೋದಲ್ಲಿ ಒನ್ಮಿಂದೊಮ್ಮೆ ಹಲವು ಸೈನಿಕರು ದಂಗೆಯೆದ್ದು ಮಂತ್ರಿ ಮಂಡಳದ ಸದಸ್ಯರನ್ನು ಕೊಲ್ಲತೊಡಗಿದರು. 300 ಸೈನಿಕರು ಪ್ರಧಾನ ಮಂತ್ರಿಯಾದ ಒಕಾಡನ ಮನೆಯನ್ನು ಮುತ್ತಿಗೆ ಹಾಕಿದರು ಒಮ್ಮೆ ಅವನನ್ನು ಕೊಂದಿಂದೆ ವರ್ತಮಾನವು ಹರಡಿತು. ಆದರೆ ಅವನ ಹಾಗಿರುವ ಅವನ ಮೈದುನನು ಕೊಲ್ಲಲ್ಪಟ್ಟನು. ಒಕಾಡನು ಹೇಗೊ ತಪ್ಪಿಸಿಕೊಂಡನು. ರಾಷ್ಟ್ರದ ಆಯದಲ್ಲಿ ಹೆಚ್ಚು ಅಂಶವು ಸೈನ್ಯಕ್ಕಾಗಿ ವ್ಯಯವಾಗುವುದನ್ನು ವಿರೋಧಿಸಿದ ಅರ್ಥ ಸಚಿವನಾದ ತಕಾಹಾಶಿಯನ್ನು ಗುಂಡಿನಿಂದ ಸುಟ್ಟರು. ನೌಕಾಧ್ಯಕ್ಷನಾದ ಸೈಟೊ ಬಲು ಬೇಗನೆ ಗುಂಡಿಗೆ ತುತ್ತಾದನು ಅಂತು ಇಂತು ಈ ದಂಗೆಯಲ್ಲಿ ಹಲ ಕೆಲವು ರಾಜಕಾರಣ ಪಟುಗಳು ಸೈನಿಕರ ಕೋಪಕ್ಕೆ ಆಹುತಿಯಾದರು. ಒಟ್ಟಿಗೆ ಎಂಬತ್ತು ಮಂದಿ ತಮ್ಮ ಪ್ರಾಣಗಳನ್ನು ಕಳಕೊಂಡರೆಂದು ವರ್ತಮಾನ.

ಆದರೆ ಸೈನ್ಯದ ಹೆಚ್ಚಿನ ಭಾಗವೂ, ನವುಕ ಸೇನೆಯೂ ಈ ದಂಗೆಯಲ್ಲಿ ಸೇರದೆ ಸರ್ಕಾರಕ್ಕೆ ನೆರವಾದರು. ಜಪಾನಿನಲಿ ಮಾರ್ಶಲ್ ಲಾ ಅಥವಾ ಜಂಗೀ ಕಾನೂನು ಘೋಷಿಸಲ್ಪಟ್ಟಿತು. ಫೆಬ್ರವರಿ ತಾ. 28 ನೇ ಮಧ್ಯಾನ್ಹದೊಳಗೆ ಎಲ್ಲಾ ದಂಗೆಖೋರರು ಸರ್ಕಾರಕ್ಕೆ ಶರಣು ಹೊಡೆಯಬೇಕೆಂದು ಚಕ್ರವರ್ತಿಯವರ ಕಡೆಯಿಂದ ಅಪ್ಪಣೆಯಾಯಿತು. ಇವರ ಅಪರಾಧವನ್ನು ವಿಚಾರಿಸಿ ಶಿಕ್ಷಿಸಲು ತಾತ್ಕಾಲಿಕ ನ್ಯಾಯಾಲಯವೊಂದುಸ್ಥಾಪಿಸಲ್ಪಟ್ಟಿತು. ಅನೇಕ ಅಧಿಕಾರಿಗಳನ್ನು ಕೆಲಸದಿಂದ ತೆಗೆದುಹಾಕಿದರು. ಮಾರ್ಚ್ 1ನೇ ತಾರೀಖಿಗೆ ಎಲ್ಲೆಲ್ಲಿಯೂ ಶಾಂತಿಯು ತಲೆದೋರಿತು.

ಜಪಾನೀ ಸೈನ್ಯದಲ್ಲಿ ಕೈಹಾಕುವುದು ಅಥವಾ ಯುದ್ಧ ನೀತಿಯಲ್ಲಿ ಬದಲಾವಣೆಗಳನ್ನು ಮಾಡಲು ಯತ್ನಿಸುವುದು ಭಯಂಕರವಾದ ಕೆಲಸವು. ಹಿಂದೆ ಈ ಕೆಲಸಗಳಿಗೆ ಕೈಹಚ್ಚಿದವರು ಬದುಕಿದುದೇ ಇಲ್ಲ. 1929ನೇ ಇಸವಿಯಲ್ಲಿ ಲಂಡನಿನಲ್ಲಿ ನಡೆದ ನವುಕಾ ಸಮ್ಮೇಲನದಲ್ಲಿ ಯುನೈಟೆಡ್ ಸ್ಟೇಟ್ಸ್, ಇಂಗ್ಲೆಂಡ್ ಮತ್ತು ಜಪಾನ್ ಇವುಗಳ ನವುಕಾ ಸೈನ್ಯವು 5: 5: 3 ದಾನೂಪಾತದಲ್ಲಿರಬೇಕೆಂದು ನಿರ್ಧರಿಸಲಾಯಿತು. ಈ ಒಪ್ಪಂದವನ್ನು ಅನುಮೋದಿಸಿ ಸಹಿ ಹಾಕಿದ ಪ್ರಧಾನ ಮಂತ್ರಿ ಹೇಮಗುಚಿಯೂ, ರಾಯಭಾರಿ ಬೇರನ್ ವಾಕಟ್ ಸುಕೊವೂ ಕೆಲವು ದಿನಗಳಲ್ಲೇ ಕೊಲ್ಲಲ್ಪಟ್ಟರು. ಕಳೆದ ವರ್ಷ ಸೇನಾಧ್ಯಕ್ಷ ಮೇಜರ್ ಜನರಲ್ ನೆಗಾಟನು ರಾಜಕೀಯ ವಿಷಯಗಳಿಂದ ಪ್ರಭಾವಿತರಾದ ಕೆಲವು ಸೇನಾಧಿಕಾರಿಗಳನ್ನು ಕೆಲಸಗಳಿಂದ ತೆಗೆದುಹಾಕಲು ಒಂದೆರಡು ದಿನಗಳಲ್ಲೇ ಅಕಸ್ಮಾತ್ತಾಗಿ ಮೃತ್ಯುವಿಗೆ ಬಲಿಯಾದನು. ಇಂತಹ ಭಯಾನಕವಾದ ಚರಿತ್ರೆಯುಳ್ಳ ಸೈನ್ಯದ ಕುರಿತು ಯಾವುದಾದರೂ ಹೊಸ ವಿಷಯಗಳನ್ನು ವಿಚಾರಿಸುವುದು ಮುಠಾ ಸಾಹಸದ ಕೆಲಸವಾಗಿದೆ.

ಒಕಾಡನು ಚಕ್ರವರ್ತಿಯವರಿಗೆ ರಾಜಿನಾಮೆ ಕೊಡಲು ಹಿರೋಟನೆಂಬವನು ಪ್ರಧಾನ ಮಂತ್ರಿಯಾದನು. ಇವನೂ ಕೇವಲ ಯುದ್ಧ ನೀತಿಯನ್ನನುಸರಿಸುವವನಲ್ಲ. ಚೀನ ಮತ್ತು ರಷ್ಯದೊಡನೆ ಸದ್ವ್ಯವಹಾರಗಳನ್ನು ಬೆಳೆಸಲು ಇವನಿಗೆ ತುಂಬಾ ಮನಸ್ಸಿದೆ, ಸೈನಿಕರನ್ನು ಸಹಾಧಾನಗೊಳಿಸಲು ಪರರಾಷ್ಟ್ರ ಸಚಿವನೂ ತಾನೇ ಆಗಿರುವನು. ಯುದ್ಧ ಸಚಿವನು ಜನರಲ್ ತರವುಚಿಯು. ಇವನು ಸೈನಿಕರು ರಾಜಕೀಯ ವಿಷಯಗಳಲ್ಲಿ ಕೈಹಾಕಕೂಡದೆಂಬ ಅಭಿಪ್ರಾಯ ಉಳ್ಳವನು. ಇವರ ಆಳ್ವಿಕೆಯು ಫಲನೀಡುವುದೋ ನೋಡಲಿಕ್ಕಿದೆ.

'ಸ್ವವಾಸಿ'

ಕೊಡೆಗೊಂದು ಕಿಟಿಕಿ.

ಕೊಡೆಗಳಲ್ಲಿ 'ಪ್ರಗತಿ' ಎಂಬುವದಿಲ್ಲ; ಫ್ಯಾಶನುಗಳೂ ಇಲ್ಲ. ಅದಕ್ಕಾಗಿ ಅಮೇರಿಕದವನೊಬ್ಬನು 'ಪ್ರಗತಿಯನ್ನುಂಟುಮಾಡಿರುವನು. ಕೊಡೆಗೆ ಒಂದು ಬದಿಯಲ್ಲಿ ಒಂದು ಚಿಕ್ಕ ಕಿಟಿಕಿಯನ್ನಿರಿಸಿದ್ದಾನೆ. ಮಳೆ ಬಂದರೆ ಜನರು ಕೊಡೆಗಳನ್ನು ಬಗ್ಗಿಸಿ ತಾವೂ ಬಗ್ಗಿ ನಡೆಯುತ್ತಾ ಎದುರು ಬರುವವರಿಗೆ ಢಿಕ್ಕಿ ಒಡೆಯುವುದುಂಟು. ಈ ಕಿಟಿಕಿಯ ಕೊಡೆ ಇದ್ದರೆ ಅಂಥ ಪಜೀತಿಗಳೆನೂ ಇರವು ಎಂದು ಆತನು ಹೇಳುತ್ತಾನೆ. ಕಿಟಿಕೆಗಳಿಗೆ ತಿಳ್ಳಗೆ ಗಾಜು ಇದೆ ಗಾಜು ಒಡೆಯುವುದಿಲ್ಲ. ಹಾಳಾದರೆ ಮತ್ತೊಂದು ಪೇಟೆಯಲ್ಲಿ ಸಿಕ್ಕುತ್ತದೆ.

ಕೊಡಗು ಸಹಕಾರಿ ಸೆಂಟ್ರಲ್ ಬ್ಯಾಂಕ್ ವಿೂಟಿಂಗು.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕಿನ ಡೈರೆಕ್ಟರುಗಳ ವಿೂಟಿಂಗು ತಾರೀಕು 28–3–1936 ರಲ್ಲು ಬೆಳಿಗ್ಗೆ 11 ಗಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ನಡೆಯಿತು. ಈ ಕೆಳಗಿನ ಡೈರೆಕ್ಟರುಗಳು ಹಾಜರಿದ್ದರು.

ಮೆ. ಗಳಾದ (1) ಪಂಡ್ಯಂಡ ಐ ಬೆಳ್ಯಪ್ಪನವರು (ಪ್ರೆಸಿಡೆಂಟರು), (2) ಮನಿಯಪಂಡ ಯಂ. ಬೆಳ್ಯಪ್ಪನವರು (ಗಾಂವ ಕಾರ್ಯದರ್ಶಿಯವರು.) (3) ರಾ. ಸಾ. ಪಾಂಡಂಡ ಚಂಗಪ್ಪನವರು (ಟ್ರೆಜರರ್) (4) ಉದಿಯೊಂಡ ಯಂ. ಮೂಚ್ಚೈಯ್ಯನವರು (5) ಐನಂಡ ಪಿ. ಕಾರ್ಯಪ್ಪನವರು (6) ಕಂಬೀರಂಡ ಕೆ. ಬೆಳ್ಯಪ್ಪನವರು (7) ಒಲ್ಲಚಂಡ ಎ. ಬೆಳ್ಯಪ್ಪನವರು (8) ಚಿಮ್ಮಡ ಎ. ಮೊದಪ್ಪನವರು (9) ಬಡುವಂಡ ಗಣಪತ್ತಿಯವರು (10) ಕೊಳ್ಳಿಮಾಡ ಕರುಂಬೈಯ್ಯನವರು (11) ನಡಿಕೇರಿಯಂಡ ಸೋಮಯ್ಯನವರು (12) ಪಿ. ಜಿ. ಮುದ್ದಮೈಯ್ಯನವರು ಮತ್ತು (13) ಕೇತಿಯಂಡ ಯಂ. ಬೆಳ್ಯಪ್ಪನವರು.

ಈ ಕೆಳಗಿನ ಡೈರೆಕ್ಟರುಗಳು ಗೈರುಹಾಜರಾಗಿದ್ದರು. ಮೆ. ಗಳಾದ (1) ಐ. ಸಿ ಸುಬ್ಬಯ್ಯನವರು ಮತ್ತು (2) ಪಿ ಬಿ. ತಮ್ಮಯ್ಯನವರು.

ಕೋಆಪರೇಟಿವ್ ಸಂಘಗಳ ರಿಜಿಸ್ಟ್ರಾರವರೂ, ನಾನ್ ಕ್ರೆಡಿಟ್ ಸೀನಿಯರ್ ಇನ್ಸ್‌ಪೆಕ್ಟರೂ ಸಹ ಹಾಜರಿದ್ದರು.

1. ಕಳೆದ ವಿೂಟಿಂಗಿನ ಪ್ರೊಸೀಡಿಂಗ್ಸನ್ನು ಓದಿ ಒಪ್ಪಲಾಯಿತು.

2. ಕಳೆದ ಫೆಬ್ರವರಿ ತಿಂಗಳ ಜಮಾ ಮತ್ತು ಖರ್ಚಿನ ಲೆಖ್ಖ ಓದಿ ಮಂಜೂರ್ಮಾಡಲಾಯಿತು.

ಹಿಂದಳ ತಿಂಗಳ ಸಿಲ್ಕು	ರೂ	33402	12 1
ಸದರಿ ತಿಂಗಳಲ್ಲು ವಸೂಲಾತಿ		21174	12 9
ಜುಮ್ಲೆ		54,577	8 10
ಸದರಿ ತಿಂಗಳಲ್ಲು ಖರ್ಚು		34762	10 3
ಬಾಕಿ ಸಿಲ್ಕು		19814	14 7

ಈ ಕೆಳಗಿನ ಸೊಸೈಟಿಗಳಿಗೆ ಸಾಲಗಳು ಮಂಜೂರಾದವು. (1) ಬೆಸಗೂರು ಸೊಸೈಟಿಗೆ ರೂ. 3500 (2) ಕಗ್ಗಟ್ಟುನಾಡು ಕ್ಯಾಪ್ ಲೋನ್, ಸೇಲ್ ಅಂಡ್ ಸಪ್ಲೈ ಸೊಸೈಟಿಗೆ ರೂ. 5000 (3) ಅಮ್ಮತ್ತಿ ಕ್ಯಾಪ್ ಲೋನ್, ಸೇಲ್ ಅಂಡ್ ಸಪ್ಲೈ ಸೊಸೈಟಿಗೆ ರೂ. 800 (4) ಮುತ್ತುನಾಡು ಸೊಸೈಟಿಗೆ ರೂ 850 ಮತ್ತು ಕಾಂಡನ ಕೊಲ್ಲಿ ಸೊಸೈಟಿಗೆ ರೂ. 1200

ಕೊಡಗು ಜೇನು ಮತ್ತು ಮೇಣ ಸಹಕಾರಿ ಸಂಘ ಮತ್ತು ಸೆಂಟ್ರಲ್ ಸಹಕಾರ ಸ್ಟೋರ್ಸ್‌ಗಳಿಗೆ ಅವುಗಳ ವಾರ್ಷಿಕ ಯಾದ ಶೇರು ಭಂಡವಾಳವ ಎಂಟರಷ್ಟು ಪೊಬಲಗನ್ನು ಅಂದರೆ ಜೇನು ಮತ್ತು ಮೇಣ ಸಂಘಕ್ಕೆ 2000 ರೂಪಾಯಿಗಳಿಗೆ ಎರಡಂತೆಯೂ, ಸೆಂಟ್ರಲ್ ಸಹಕಾರಿ ಸ್ಟೋರ್ಸಿಗೆ 4000 ರೂಪಾಯಿಗಳಿಗೆ ಎರಡಂತೆಯೂ ಸಾಲ ಮಂಜೂರು ಮಾಡುವಂತೆ ತೀರ್ಮಾನಿಸಲಾಯಿತು.

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ
ಭಾರತ ವಿಮೂರಂಗದಲ್ಲಿ ಯೋಗ್ಯಸ್ಥಾನವನ್ನೂ, ಉಚ್ಚಗೌರವವನ್ನೂ ಸಂಪಾದಿಸಿರುವ

ಮಂಗಳೂರಿನ

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಕನ್ನಡಿಗರ ಹೆಮ್ಮೆಯು, ನಿಮ್ಮ ಒಲುಮೆಯ ಈ ಸಂಸ್ಥೆಯಲಿ
ತಪ್ಪದೆ ವಿಮೆಯನ್ನಿಳಿಸಿ.

ಮೊದಲಿನ 5 ವರ್ಷಗಳ ಮೌಲ್ಯವೇತನದ ಫಲಿತಾಂಶವಾಗಿ ಪ್ರತಿಯೊಂದು
1000 ರೂಪಾಯಿಗಳ ವಿಮೂಪತ್ರದ ಮೇಲೆ,–

ವರ್ಷ 1ರ ರೂಪಾಯಿ 10ರ ಬೋನಸ್ ಕೊಡಲಾಗಿದೆ.

(ಪ್ರಥಮ ಮೌಲ್ಯವೇತನದಲ್ಲಿ ಇಷ್ಟು ಬೋನಸನ್ನು ಹಾಚಿದ ಹಿಂದೀ ವಿಮೂಕಂಪೆನಿಗಳು
ಅತಿ ವಿರಳವೆಂಬುದನ್ನು ಮರೆಯದಿರಿ.)

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ

ಏಜಂಟರು ಬೇಕು.

ಮಾಹಿತಿಪತ್ರ, ವಿವರಣೆಯ ಹಸ್ತಕಾದಿಗಳಿಗೆ:–

ಮಂಗಳೂರಿನ ಕಾರ್ಯಾಲಯಕ್ಕೆ ಬರೆದು ಕೇಳಿ.

ಮಡಿಕೇರಿ ಏಜಂಟರು—
ಬಿ. ಜಿ. ಬೆಳ್ಯಪ್ಪನವರು,
ವಸ್ತ್ರಗಳ ವ್ಯಾಪಾರಿ, ಮಡಿಕೇರಿ. (52–7)

ಸುಂಟಿಕೊಪ್ಪ ಏಜೆಂಟರು—
ಏ. ಎಸ್. ಮೂಚಯ್ಯನವರು.
ವಸ್ತ್ರಗಳ ವ್ಯಾಪಾರಿ, ಸುಂಟಿಕೊಪ್ಪ.

ಈ ಕೆಳಗಿನ ಸೊಸೈಟಿಗಳ ಸಾಲದ ಅರ್ಜಿಗಳನ್ನು ತರಿಸಿ ಕೊಂಡು ಅವುಗಳ ಕೆಲಸ ಕಾರ್ಯಗಳ ವಿಷಯ ರಿಪೋರ್ಟು ಬರುವ ವಿಂಟಿಂಗಿನಲ್ಲಿ ಆಲೋಚಿಸುವಂತೆ ತೀರ್ಮಾನವಾಯಿತು. (1) ಬೇಗೂರು ಸೊಸೈಟಿ (2) ನಡಿಕೇರಿ ಸೊಸೈಟಿ ಮತ್ತು (3) ಬಿಳಿಗೇರಿ ಸೊಸೈಟಿ.

ಈ ಕೆಳಗಿನ ಸೊಸೈಟಿಗಳ ಸಾಲದ ಅರ್ಜಿಗಳನ್ನು ಕಾರಣಾಂತರದಿಂದ ತಿರಸ್ಕರಿಸಲಾಯಿತು. (1) ಕೋಪಟ್ಟಿ ಸೊಸೈಟಿ (2) ನಾಪೋಕ್ಲು ಸೊಸೈಟಿ ಮತ್ತು (3) ಅಂಕನಳ್ಳಿ ಸೊಸೈಟಿ.

ಕಂದ, ಈಚೂರು ಮತ್ತು ಹಾತೂರು ಕೊಳತಡ ಬೈಗೋಡು ಸೊಸೈಟಿಗಳಿಗೆ 300 ರೂಪಾಯಿಗಳ ಪ್ರಕಾರ ಜುಮ್ಲ 900 ರೂಪಾಯಿ ಸಾಲ ಮಂಜೂರ್ಮಾಡಲಾಯಿತು.

ಬ್ಯಾಂಕಿಗೆ ಪಾವತಿ ಮೂಡಲಿಕ್ಕಿರುವ 5050—11—0 ರೂಪಾಯಿಗಳ ಮರುಪಾವತಿಗೆ 10 ಕಂತುಗಳನ್ನು ಕೊಡಿಸಿಕೊಡಬೇಕೆಂದು ಮೂದಾಪುರ ಸಂಘದವರು ಬರಕೊಂಡ ಅರ್ಜಿಯನ್ನು ತಿರಸ್ಕರಿಸಲಾಯಿತು ಮತ್ತು ಸದರಿ ಸೊಸೈಟಿಯ ಕೆಲಸ ಕಾರ್ಯಗಳ ವಿಷಯ ಅದಕ್ಕೆ ಸಮ್ಮಂಧಪಟ್ಟ ಯೂನಿಯನ್ನಿನವರು ರಿಪೋರ್ಟು ಬರೆದು ಕಳುಹಿಸುವಂತೆ ಅವರನ್ನು ಕೇಳಿಕೊಳ್ಳುವ ಹಾಗೆ ತೀರ್ಮಾನಿಸಲಾಯಿತು

ಬ್ಯಾಂಕಿನ ಮೆಂಬರುಗಳಾಗಲು ಅರ್ಜಿ ಬರೆದುಕೊಂಡ ಈ ಕೆಳಗಿನವರುಗಳನ್ನು ಮೆಂಬರುಗಳಾಗಿ ಸೇರಿಸಿಕೊಳ್ಳಲಾಯಿತು. (1) ಶ್ರೀಮತಿ ಕೋದಂಡ ಚೋಂದವ್ವನವರು (2) ಶ್ರೀಮತಿ ಕುಟ್ಟೇಟಿರ ಸುಬ್ಬವ್ವನವರು (3) ಮೆ. ಪಾಂಡಂಡ ತಿಮ್ಮಯ್ಯನವರು (4) ಪೊದಕೇರಿ ಗೈನ್ ಬ್ಯಾಂಕ್ ಲಿಮಿಟೆಡ್ (5) ಜೇನು ಮತ್ತು ಮೇಣ ಸಹಕಾರಿ ಸಂಘ ಲಿಮಿಟೆಡ್ ಮತ್ತು (6) ಸೆಂಟ್ರಲ್ ಸಹಕಾರ ಸ್ಟೋರ್ಸ್ ಲಿಮಿಟೆಡ್.

ನೇಗಳೆ ಕರ್ಕಳ್ಳಿ ಸೊಸೈಟಿಗೆ ತಾ. 6—7—1935 ರಲ್ಲು ಮಂಜೂರ್ಮಾಡಿದ 1500 ರೂಪಾಯಿಗಳಿಗೆ 6 ಕಂತುಗಳ ಬದಲು 10 ಕಂತುಗಳನ್ನು ಕೊಡಿಸಿಕೊಡಬೇಕೆಂದು ಸದರಿ ಸೊಸೈಟಿಯವರು ಬಂಕೊಂಡ ಅರ್ಜಿಯನ್ನು ತಿರಸ್ಕರಿಸಲಾಯಿತು ಮತ್ತು ಅದರ ಕೆಲಸ ಕಾರ್ಯಗಳ ವಿಷಯ ಅದಕ್ಕೆ ಸಮ್ಮಂಧಪಟ್ಟ ಯೂನಿಯನ್ನಿನವರು ರಿಪೋರ್ಟು ಬರೆದು ಕಳುಹಿಸುವಂತೆ ಅವರನ್ನು ಕೇಳಿಕೊಳ್ಳುವ ಹಾಗೆ ತೀರ್ಮಾನಿಸಲಾಯಿತು.

ಒಬ್ಬ ಮಹನೀಯಳು ಪೌತಾದ ತನ್ನ ಗಂಡನು ಬ್ಯಾಂಕಿನಲ್ಲಿಟ್ಟಿದ್ದ ಡಿವಾಜಿಟ್ಟು ಹಣವನ್ನು ತನ್ನ ಮೈನರ್ ಮಗನ ಹೆಸರಿಗೂ ಮತ್ತು ಶೇರು ಹಣವನ್ನು ತನ್ನ ಮಗಳ ಹೆಸರಿಗೂ ವರ್ಗಾಯಿಸಿಕೊಡಬೇಕೆಂದು ಬರಕೊಂಡ ಅರ್ಜಿಯನ್ನು ಆಲೋಚಿಸಲಾಗಿ ಈ ವಿಷಯದಲ್ಲಿ ವಕೀಲರ ಅಭಿಪ್ರಾಯವನ್ನು ತೆಗೆದುಕೊಳ್ಳುವಂತೆ ತೀರ್ಮಾನಿಸಲಾಯಿತು.

ಹುದಿಕೇರಿ ಸಂಘದವರು ತಮ್ಮ ಮೆಂಬರುಗಳಿಂದ ವಸೂಲಾದ ಭತ್ಯವನ್ನು ಕಿಗ್ಗಟ್ಟುನಾಡು ಕ್ರಾಪ್ ಲೋನ್ ಸೇಲ್ ಅಂಡ್ ಸಪ್ಲೈ ಸೊಸೈಟಿಯಲ್ಲಿ ಡಿವಾಜಿಟ್ಟು ಮೂಡಿರುವ ಕಾರಣ ಸದರಿ ಸಂಘದವರು ಬ್ಯಾಂಕಿಗೆ ಮರುಪಾವತಿ ಮೂಡಲಿಕ್ಕಿರುವ ವಾಯಿದೆ ವಿೂರಿದ ಹಣ ಮತ್ತು ಈ ವರ್ಷದ ಕಂತು ಹಣ ಸೇರಿ ಜುಮ್ಲ ರೂ. 972—11—0 ಗಳಿಗೆ ಬರುವ ಏಪ್ರಿಲ್ ಆಖೈರು ವರೆಗೆ ಮರುಪಾವತಿ ಮೂಡಲು ಸಮಯ ಕೊಡಬೇಕಾದು ಅವರು ಬರಕೊಂಡ ಅರ್ಜಿಯನ್ನು ಓದಲಾಯಿತು.

ವಾಯಿದೆ ವಿೂರಿದ ಹಣವನ್ನು ಮರುಪಾವತಿ ಮೂಡಲು ಈ ಏಪ್ರಿಲ್ ಆಖೈರು ವರೆಗೆ ಸಮಯ ಕೊಡುವಂತೆಯೂ ಮತ್ತು ಸದರಿ ಸೊಸೈಟಿಯವರು ಮರುಪಾವತಿ ಮೂಡಲಿಕ್ಕಿರುವ ಈ ವರ್ಷದ ಕಂತು ಮತ್ತು ಪೂರ್ತಿ ಹಣದ ಬಡ್ಡಿಯನ್ನು ಕಿಗ್ಗಟ್ಟುನಾಡು ಕ್ರಾಪ್ ಲೋನ್, ಸೇಲ್ ಅಂಡ್ ಸಪ್ಲೈ ಸೊಸೈಟಿಯ ಪ್ರೆಸಿಡೆಂಟರು ತಾವು ಪಾವತಿ ಮೂಡುತ್ತೇವೆಂದು ಭರವಸೆಕೊಟ್ಟು ಅದೇ ವೇರೆ ಅವರಿಂದ ಸರ್ಟಿಫಿಕೇಟನ್ನು ಕೊಡಿಸಿದಲ್ಲು ಹೆಚ್ಚಿನ ಸಮಯ ಕೊಡಬಹುದಾಗಿ ತೀರ್ಮಾನಿಸಲಾಯಿತು.

ಬ್ಯಾಂಕಿನ ಸಿಬ್ಬಂದಿಗಳ ಕಾನ್‌ಫೆರೆನ್ಸಿನ ಪ್ರೊಸೀಡಿಂಗ್ಸಿನಲ್ಲಿ ನಮೂದಿಸಿದ ಈ ಕೆಳಗಿನ ವಿಷಯಗಳನ್ನು ಚರ್ಚಿಸಿ ತೀರ್ಮಾನಿಸಲಾಯಿತು.

(1) ಬ್ಯಾಂಕಿನ ಡೈರೆಕ್ಟರುಗಳ ಬೋರ್ಡಿನ ಅನುಮತಿ ಮೇರೆ ಸಿಬ್ಬಂದಿಗಳ ಒಂದು ಸಂಘವನ್ನೇರ್ಪಡಿಸಿ ಅದರ ಕಾರ್ಯನಿರ್ವಾಹಕ್ಕಾಗಿ 5 ಮೆಂಬರುಗಳಿಂದ ಕೂಡಿದ ಒಂದು ಕಮಿಟಿಯನ್ನು ಸಹ ಏರ್ಪಡಿಸಬೇಕೆಂಬ ವಿಷಯವನ್ನು ಚರ್ಚಿಸಲಾಗಿ—ಹಾಗೆ ಏರ್ಪಡಿಸತಕ್ಕ ಸಂಘದ ರೂಲ್ಸಿನ ನಖಲೊಂದನ್ನು ಡೈರೆಕ್ಟರುಗಳ ಅವಗಾಹನೆಗೆ ಪೊಡಲು ಕಳುಹಿಸಬೇಕೆಂದು ತೀರ್ಮಾನಿಸಲಾಯಿತು.

(2) ಸುವರ್ ವೈಜರುಗಳ ಪ್ರಾವಿಡೆಂಟ್ ಫಂಡಿನ ಹದಲಿಕೆಯನ್ನು ಪ್ರತೀ ರೂಪಾಯಿಗೂ ಎರಡಾಣೆಯಂತೆ ಹೆಚ್ಚಿಸಿಕೊಡಬೇಕಂದು ಪ್ರೊಸೀಡಿಂಗ್ಸ್ ಮೂಡಿದ ವೇರೆ ಸದರಿ ವಿಷಯವನ್ನು ಬ್ಯಾಂಕಿನ ಬರುವ ವಿಂಟಿಂಗಿನಲ್ಲಿ ಆಲೋಚಿಸುವಂತೆ ತೀರ್ಮಾನಿಸಲಾಯಿತು.

(3) ಸುಪರ್ ವೈಜರುಗಳ ಸಂಬಳವನ್ನು ಮನಿಯಾರ್ಡರ್ ಚಾರ್ಜಿ ವಜ ಹಿಡಿಯದೆ ಕಳುಹಿಸಿಕೊಡಬೇಕೆಂದು ಮೂಡಿದ ಠರಾವನ್ನು ಒಪ್ಪಿಕೊಳ್ಳಲಾಗಲಿಲ್ಲ.

(4) ಗವರ್ನ್‌ಮೆಂಟ್ ಫಂಡನೆಂಟ್‌ಲ್ ರೂಲ್ ಮೇರೆ ಸುಪರ್ ವೈಜರುಗಳಿಗೆ ಅವರ ವರ್ಗಾವರ್ಗಿ ಕಾಲಗಳಲ್ಲಿ ಪ್ರಯಾಣದ ಭತ್ಯವನ್ನು ಮುಂಜೂರ್ಮಾಡಬೇಕೆಂಬ ಠರಾವನ್ನು ಅಂಗೀಕರಿಸಲಾಯಿತು.

(5) ಸುಪರ್ ವೈಜರುಗಳಿಗೆ ತಿಂಗಳೊಂದರ 15 ರೂಪಾಯಿಗಳಂತೆ ನಿರಖು ಎಲೋವೇನ್ಸ್ ಕೊಡಿಸಿಕೊಡಬೇಕೆಂಬ ವಿಷಯವನ್ನು ಸುಪರ್‌ವಿಜನ್ ಬೋರ್ಡಿನವರ ತೀರ್ಮಾನಕ್ಕೆ ಬಿಡಲಾಯಿತು.

(6) ಸುಪರ್‌ವಿಜನ್ ಬೋರ್ಡಿನ ಹೆಡ್‌ಕ್ಲಾರ್ಕರ ಸಂಬಳದ ಸ್ಕೇಲನ್ನು 50—2½—65 ಕ್ಕೆ ಏರಿಸಬೇಕೆಂಬ ವಿಷಯ ಸುಪರ್‌ವಿಜನ್ ಬೋರ್ಡಿನ ತೀರ್ಮಾನಕ್ಕೆ ಬಿಡಲಾಯಿತು.

(7) ಬ್ಯಾಂಕಿನ ಸಿಬ್ಬಂದಿಗಳಿಗೆ ಗವರ್ನ್‌ಮೆಂಟ್ ರೂಲ್ಸ್ ಪ್ರಕಾರ ಎಲ್ಲಾ ರಜಾ ದಿವಸಗಳನ್ನು ಮುಂಜೂರ್ಮಾಡಿಸಿಕೊಡಬೇಕೆಂಬ ಅವರ ಕೋರಿಕೆಯನ್ನು ಅಂಗೀಕರಿಸಲಿಲ್ಲ.

(8) ಸುಪರ್‌ವೈಜರುಗಳನ್ನು ತರಬೇತಿಗೋಸ್ಕರ ಮದ್ರಾಸಿಗೆ ಕಳುಹಿಸುವಾಗ್ಗೆ ಪ್ರತೀ ಒಬ್ಬನಿಗೂ 20 ರೂಪಾಯಿಗಳಂತೆ ವೇತನಗಳನ್ನು ಕೊಡಬೇಕೆಂಬ ವಿಷಯ ಚರ್ಚಿಸಲಾಗಿ ಸರಕಾರದವರು ಪ್ರತೀ ಒಬ್ಬನಿಗೆ 25 ರೂಪಾಯಿಗಳಂತೆ ತರಬೇತು ವೇತನವನ್ನು ಕೊಡುವುದಾದರೆ ಬ್ಯಾಂಕಿನಿಂದ 10 ರೂಪಾಯಿಗಳಂತೆ ವೇತನವನ್ನು ಕೊಡಬಹುದೆಂದು ತೀರ್ಮಾನಿಸಲಾಯಿತು.

(9) ಸುಪರ್‌ವೈಜರುಗಳಿಗೆ ತಿಂಗಳಿಗೆ 3 ರೂಪಾಯಿಗಳಂತೆ ಮನೆ ಬಾಡಿಗೆಯನ್ನು ಕೊಡಿಸಿಕೊಡಬೇಕೆಂಬ ವಿಷಯವನ್ನು ಸುಪರ್‌ವಿಜನ್ ಬೋರ್ಡಿನವರ ತೀರ್ಮಾನಕ್ಕೆ ಬಿಡಲಾಯಿತು.

ಚರ್ಮವನ್ನು ಶೇಕರಿಸಲು ಮತ್ತು ಮಾರಲು ಒಂದು ಸಂಘವನ್ನು ಏರ್ಪಡಿಸಲಿಕ್ಕಾಗಿ ತಕ್ಕ ಅಭಿಪ್ರಾಯಗಳನ್ನು ಕೊಡಲು ಈ ಕೆಳಗಿನ ಮಹನೀಯರುಗಳಿಂದ ಕೂಡಿದ ಒಂದು ಕಮಿಟಿಯನ್ನು ಏರ್ಪಡಿಸಲಾಯಿತು.

(1) ಮ. ರಾ. ಗಳಾದ ಕೆ. ಜೆ. ಚಂಗಪ್ಪನವರು (ರಿಜಿಸ್ಟ್ರಾರ್) (2) ಪಂಡ್ಯಂಡ ಐ. ಬೆಳ್ಯಪ್ಪನವರು (ಪ್ರೆಸಿಡೆಂಟ್) (3) ರಾ ಸಾ. ಪಿ ಎ. ಚಂಗಪ್ಪನವರು (4) ಐನಂಡ ಪಿ. ಕಾರ್ಯಪ್ಪನವರು (5) ಬಲ್ಲಚಂಡ ಎ ಬೆಳ್ಯಪ್ಪನವರು (6) ಕೊಳ್ಳಿಮಾಡ ಕರುಂಬೆಯ್ಯನವರು ಮತ್ತು (7) ಮನಿಯಪಂಡ ಯಂ ಬೆಳ್ಯಪ್ಪನವರು (ಕನ್‌ವೀನರ್)

ಪಿ. ಐ. ಬೆಳ್ಯಪ್ಪ,
(ಅಧ್ಯಕ್ಷರು)

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ]

ಬಸ್ಸು ಚಾರ್ಜಿನ ದರ.

ಅಯ್ಯಾ,

ಕೆಲವು ದಿವಸಗಳ ಹಿಂದೆ ಬಸ್ಸು ಚಾರ್ಜಿನ ದರವನ್ನು ಕುರಿತು ನೀವು ಬರೆದ ಅಗ್ರಲೇಖನವನ್ನು ಓದಿ ನೋಡಿ ನನಗೆ ತುಂಬಾ ಸಂತೋಷವೂ, ಕೃಪ್ತಿಯೂ ಉಂಟಾಯಿತು. ನೀವು ಕೊಟ್ಟಂಥಾ ಕಾರಣಗಳನ್ನು ನೋಡಿದರೆ ಬಸ್ಸು ಚಾರ್ಜಿನ ಅತಿ ಕಡಿಮೆ ದರವನ್ನು ನಿಶ್ಚಯ ಮೂಡುವುದು ಪ್ರಯೂಣೀಕರ ಹಿತದ ದೃಷ್ಟಿಯಿಂದ ಅತ್ಯಗತ್ಯವೆಂದು ಕಂಡುಬರುತ್ತದೆ. ಪ್ರಯೂಣೀಕರ ಹಿತಕ್ಕಾಗಿ ಅತಿ ಹೆಚ್ಚಿನ ದರವನ್ನು ನಿರಖು ಮೂಡಿರುವ ಅಧಿಕಾರಿಗಳು ಅತಿ ಕಡಿಮೆ ದರವನ್ನು ನಿಶ್ಚಯಿಸದೆ ಇರಲು ಕಾರಣವೇನೆಂದು ಗೊತ್ತಾಗುವುದಿಲ್ಲ. ಈಗಲಾದರೂ ನಿಮ್ಮ ಲೇಖನವನ್ನು ನೋಡಿದ ಮೇಲಾದರೂ ಅವರ್ಯಾಕೆ ಈ ವಿಚಾರದಲ್ಲಿ ತಡಮಾಡುತ್ತಿರುವರೋ ತಿಳಿಯದು. ಇದೀಗ ಬೇಸಿಗೆ ಕಾಲ—ಹೆಚ್ಚಿನ ಜನರು ಬಸ್ಸುಗಳಲ್ಲಿ ಪ್ರಯಾಣಮಾಡುವ ಕಾಲ. ಆದುದರಿಂದ ಅಧಿಕಾರಿಗಳು ಈ ವಿಷಯ ಕೂಡಲೆ ನಿಶ್ಚಯಮಾಡುವುದು ಅಗತ್ಯವಾಗಿದೆ.

ಮಡಿಕೇರಿ—ವೀರಾಜಪೇಟೆ—ಹುದಿಕೇರಿ ಲೈನಿನಲ್ಲಿ ಓಡ್ಯಾಡುತ್ತಿದ್ದ ಕೆಲವು ಬಸ್ಸುಗಳು ಈಗ ಒಂದು ತಿಂಗಳಿಂದ ಅಂದರೆ ಆದಿ ಶ್ರೀ ಕಾವೇರಿ ಸರ್ವಿಸು ಶ್ರೀ ಗಣೇಷ ಮತ್ತು ಸಿ. ಪಿ. ಸಿ. ಬಸ್ಸು ಸರ್ವಿಸುಗಳೊಂದಿಗೆ 'ಕಂಬೈನ್' ಆದ ಮೇಲೆ ನಿಂತು ಹೋಗಿ, ಪ್ರಯೂಣೀಕರಿಗೆ ತುಂಬಾ ತೊಂದರೆಯಾಗಿದೆಯೆಂಬುದರಲ್ಲಿ ಸಂಶಯವಿಲ್ಲ ನಿಲ್ಲಿಸಿರುವ ಸರ್ವಿಸುಗಳನ್ನು ಪುನಹ ನಡಿಸುವಂತೆ ಅಥವಾ ಹೊಸಬರಿಗೆ ಲೈಸನ್ಸು ಕೊಡುವಂತೆ ಅಧಿಕಾರಿಗಳು ತೀರ್ಮಾನಿಸದೆ ಇರುವದು ವ್ಯಸನಕರ. ಇನ್ನಾದರೂ ಸಂಬಂಧಪಟ್ಟ ಅಧಿಕಾರಿಗಳು ಇದಕ್ಕೆ ಗಮನಕೊಡುವರೇ ?

'ಪ್ರಯೂಣಿಕ.'

ಪಿ. ಡಬ್ಲ್ಯೂ. ಇಲಾಖೆಯ ದುಂದುಗಾರಿಕೆ.

ಅಯ್ಯಾ,

ಮೊದಲೇ ಸರ್ಕಾರಿ ಇಲಾಖೆಗಳಲ್ಲಿ ಪಿ. ಡಬ್ಲ್ಯೂ. ಇಲಾಖೆಯು ವೆಚ್ಚದ ಇಲಾಖೆಯೆಂದು ಹೆಸರುಗೊಂಡಿದೆ. ಖರ್ಚು ತುಂಬಾ ಮೂಡುತ್ತಾ ಉತ್ಪತ್ತಿ ಒಹು ಕಡಿಮೆಯಾಗಿರುವ ಇಲಾಖೆಯೇ ಇದು. ಮೊದಲಾದರೋ ಜನರಲ್ಲಿ ಹಣವು ಚೆನ್ನಾಗಿ ಓಡ್ಯಾಡುತ್ತಿತ್ತು, ಸರ್ಕಾರಕ್ಕೆ ಕಂದಾಯ ಕಾಣಿಕೆಗಳು ಸರಿಯಾಗಿ ದೊರೆಯುತ್ತಿತ್ತು; ಆದುದರಿಂದ ಈ ಇಲಾಖೆಯ ಖರ್ಚನ್ನು ಆಗ್ಗೆ ಯಾರೂ ಖಂಡಿಸುತ್ತಿರಲಿಲ್ಲ ಮತ್ತು ಆಗ್ಗೆ ಅದು ಮಿತಿ ಮೀರುತ್ತಿರಲಿಲ್ಲ. ಈಗಲಾದರೋ ಆರ್ಥಿಕ ಮುಗ್ಗಟ್ಟಿನ ಸ್ಥಿತಿಯಿಂದ ಜನರ ಹಾಗೂ ಸರ್ಕಾರದ ಉತ್ಪತ್ತಿಯು ಬಹು ಮಟ್ಟಿಗೆ ಇಳಿದು ಹೋಗಿದೆ. ಅದರಂತೆಯೇ ಸರ್ಕಾರಿ ಖರ್ಚು ಕಡಿಮೆಯಾಗಬೇಕಿತ್ತು. ಅದರ ಬದಲು ಅಡಳಿತ ಖರ್ಚು ಹೆಚ್ಚುತ್ತಾ ಇದೆ. ಬರೇ ವೆಚ್ಚದ ಇಲಾಖೆಯಾಗಿದ್ದ ಪಿ. ಡಬ್ಲ್ಯೂ. ಏನಲ್ಲಿ ದುಂದುಗಾರಿಕೆಯು ಹೆಚ್ಚಾಗುತ್ತಿದೆ. ಇದಕ್ಕೆ ಒಂದೆಂಡು ಉದಾಹರಣೆಗಳನ್ನು ಕೊಟ್ಟರೇನೇ ವಾಚಕಮಹಾಶಯರಿಗೆ ಅದು ಮಂಡಟ್ಟಾಗುವುದು.

ಈ ಇಲಾಖೆರಲ್ಲಿ ಬೇರೆ ಇಲಾಖೆಗಳಂತೆ ಸಂಬಳ ಕೊಟ್ಟು ಸಿಬ್ಬಂದಿ ಇಟ್ಟಿರುವುದಲ್ಲದೆ, ಸಿಬ್ಬಂದಿ ಖರ್ಚಿಗೆ ಸೇರದೆ ಇರುವ ಕೆಲವು ಕೆಲಸಗಾರರೂ ಇರುವರು. ರೋಡು ಮೇಸ್ತ್ರಿಗಳ ಸಂಬಳವು ಸಿಬ್ಬಂದಿ ಖರ್ಚಿಗೆ ಸೇರುವುದಿಲ್ಲ, ಅದು ರಸ್ತೆ ಕೆಲಸಕ್ಕೆ ಸೇರಿ ಹೋಗುತ್ತೆ. ಹಾಗೆಯೇ ಈ ಇಲಾಖೆಯ ವರ್ಕ್‌ಶಾಪ್ ಒಂದಿದೆಯಂತೆ ಅದರಲ್ಲಿ ತಿಂಗಳಿಗೆ ಸುಮಾರು ರೂ. 45 ಸಂಬಳದ ಒಬ್ಬ ಕಮ್ಮಾರನೂ, ಅವನಿಗೆ ಇಬ್ಬರು ಕಮ್ಮಿ ಸಂಬಳದ ಅಸಿಸ್ಟೆಂಟರೂ ಇರುವರಂತೆ. ಈಗ್ಯೆ ಕಮ್ಮಾರನ ದಿನಗೂಲಿಯು 12 ಆಣೆಯಿಂದ 1 ರೂ. ಇರುವಾಗ್ಯೆ ಈ ದುಂದುಗಾರಿಕೆಯು ಖರ್ಚಾಕೆ ಮೂಡಬೇಕು ? ಈ ಕೆಲಸವನ್ನು ಕಂಟ್ರಾಕ್ಟು ಮೂಲಕ ಮೂಡಿಸಕೂಡದೋ ?

ರೋಡು ಇಂಜಿನ್‌ಗಳ ಸಿಬ್ಬಂದಿಯನ್ನು ನೋಡಿದರೆ ಅದೊಂದು ಬಿಳೇ ಆನೆಯೆಂದೇ ಹೇಳಬಹುದು. ಇಂಜಿನ್ ಡ್ರೈವರುಗಳಿಗೆ ರೂ. 50 ರಿಂದ 100 ರ ವರೆಗೆ ಸಂಬಳವಿದೆ ಮೊದಲು 6 ರೋಲರ್ ಇಂಜಿನ್‌ಗಳು ಮಾತ್ರ ಇದ್ದವು ಈಗ 8 ಇವೆ. ಆದರೆ ಮೊದಲು ರಸ್ತೆಗಳಿಗೆ ಕಲ್ಲು ಹಾಕುತ್ತಿದ್ದದ್ದಕ್ಕಿಷ್ಟು ಈಗ ಹಾಕುವುದು ಕಾಣುವುದಿಲ್ಲ. ಹಾಗಾದರೆ ಹೆಚ್ಚಿನ ಇಂಜಿನ್‌ಗಳ ಅವಶ್ಯಕತೆಯೇನು ? ಇದರೊಂದಿಗೆ ಆ ಇಂಜಿನ್‌ಗಳ ವೇರೆ ಖರ್ಚು ವಿಪರೀತವಾಗಿದೆಯೆಂತೆ; ಇದೂ ಸಾಲದಕ್ಕೆ ಇಂಜಿನ್ ಡ್ರೈವರುಗಳ ಮೇಲುಸ್ತುವಾರಿಗಾಗಿ ಒಬ್ಬ ಫೋರ್‌ಮ್ಯಾನರಿಂಬವರಂತೆ. ಅನುಭವಸ್ಥರೂ, ತರಬೇತು ಹೊಂದಿದ ಡ್ರೈವರುಗಳೇ ಮೂಡಿಕೊಳ್ಳಬಹುದಾದ ಈ ಕೆಲಸಕ್ಕೆ ಒಬ್ಬರನ್ನು ತಿಂಗಳಿಗೆ ರೂ. 150 ಸಂಬಳಕೊಟ್ಟು ಹೊರಗಿಂದ ಕರೆಯಿಸಿ ನೇಮಿಸಿರುವರಂತೆ. ಈ ಕನಿಷ್ಠ ಕಾಲದಲ್ಲಿ ವರ್ಷಕ್ಕೆ ರೂ. 1800 ಖರ್ಚಿನ ಅನಾವಶ್ಯದ ದುಂದುಗಾರಿಕೆಯ ಹುದ್ದೆಯನ್ನು ಇಡಬಹುದೇ ? ಅದರ ಮೇಲೂ ಇವರು ಮಾಡುವ ಕೆಲಸವಾದರೂ ಏನೆಂದು ಗೊತ್ತಾಗುವುದಿಲ್ಲ. ಬರೇ ಆರು ತಿಂಗಳು ಇಂಜಿನ್ ನಡಿಸುತ್ತಿರುವ 8 ಡ್ರೈವರುಗಳ ಮೇಲುಸ್ತುವಾರಿ ಮಾಡುವುದೇ ಇವರ ಕೆಲಸವಾದರೆ ಇದೆಂಥಾ ದುಂದುಗಾರಿಕೆಯ ವೆಚ್ಚ ! ಡ್ರೈವರುಗಳ ಮೇಲುಸ್ತುವಾರಿಯನ್ನು ಮೊದಲು ಮಾಡುತ್ತಿದ್ದಂತೆ ಎಗ್ಸಿಕ್ಯುಟಿವ್ ಇಂಜಿನೀಯರೂ, ಸಬ್ ಡಿವಿಜನ್‌ಲ್ ಆಫೀಸರೂ, ಸೆಕ್ಷನ್ ಆಫೀಸರುಗಳೂ ಈಗ ಯಾಕೆ ಮೂಡಬಾರದು ?

ಇಷ್ಟೆಲ್ಲಾ ಅನಾವಶ್ಯದ ಖರ್ಚು ಸಾಲದೆಂದು ಈ ಇಲಾಖೆಯವರು ಒಂದು ದೊಡ್ಡ ಲಾರಿಯನ್ನೂ ಇಟ್ಟು ಕೊಂಡಿದ್ದಾರೆ. ಅದರ ಡ್ರೈವರ ಕ್ಲೀನರ ಸಂಬಳ, ಪೆಟ್ರೋಲ್ ಖರ್ಚು, ರಿಪೇರಿ ವಗೈರೆ ಖರ್ಚಿನ ಲೆಕ್ಕವನ್ನು ಅದರಿಂದಾಗುವ ಕೆಲಸದೊಂದಿಗೆ ಹೋಲಿಸಿದರೆ ಇದೂ ತುಂಬಾ ನಷ್ಟಕರವೆಂದು ಹೇಳಿದರೆ ತಪ್ಪಾಗಲಾರದು. ಈ ವಿಷಯಗಳ ಖರ್ಚು ವೆಚ್ಚದ ತಪಸೀಲು ಆ ಇಲಾಖೆಯ ವೇರಧಿಕಾರಿಗಳೇ ಗೊತ್ತಾಗುವುದು. ಆದುದರಿಂದ ಮುಂತುವರ್ಜಿಯಿಂದ ಮೇಲುಸ್ತುವಾರಿಯ ಕೆಲಸವನ್ನು ನಡಿಸುತ್ತಿರುವ ಈಗಿನ ಎಗ್ಸಿಕ್ಯುಟಿವ್ ಇಂಜಿನಿಯರವರು ಈ ಬಾಬಿನ ಖರ್ಚುಗಳನ್ನೆಲ್ಲಾ ಚೆನ್ನಾಗಿ ಪರಿಶೀಲಿಸಿ, ಅನಾವಶ್ಯದ ಮತ್ತು ದುಂದುಗಾರಿಕೆಯ ವೆಚ್ಚವನ್ನು ತೆಗೆದು ಹಾಕಿ ಸರ್ಕಾರಕ್ಕೆ ಉಂಟಾಗುತ್ತಿರುವ ನಷ್ಟವನ್ನು ಹೋಗಲಾಡಿಸುವರಾಗಿ ಕೋರುವ.

'ದೇಶೀಯ.'

ಪ್ರಕಟಣೆ.

ಕೊಡಗು ವೀರಶೈವ ವಿದ್ಯಾಭಿವೃದ್ಧಿ ಸಂಘ.

ವೀರಶೈವ ಮಹಾ ಜನಗಳಲ್ಲಿ ವಿನಂತಿ.

ತಾರೀಕು 12—4—36 ನೇ ಭಾನುವಾರ ಬೆಳಿಗ್ಯೆ ಕೊಡಗು ವೀರಶೈವ ವಿದ್ಯಾಭಿವೃದ್ಧಿ ಸಂಘದ 6 ನೇ ವಾರ್ಷಿಕ ಜನರಲ್ ವಿಂಟಿಂಗನ್ನು ದಿವಾನ್ ಬಹದ್ದೂರ್ ಕೆ. ಚಂಗಪ್ಪನವರ ಅಧ್ಯಕ್ಷತೆಯಲ್ಲು ಶನಿವಾರಸಂತೆ ಗ.ಡ.ಗಳೆ ಜಯದೇವ ಬಾಣಿಯಲ್ಲು ನಡೆಸಲು ಏರ್ಪಡಿಸಿರುವುದರಿಂದ ಎಲ್ಲಾ ವೀರಶೈವ ಮಹನೀಯರುಗಳು ಆ ದಿವಸ ದಯಮಾಡಿಸಬೇಕಾಗಿ ಈ ಮೂಲಕ ಕೇಳಿಕೊಳ್ಳೋಣವಾಗಿದೆ. ಮೇಲ್ಕಂಡ ಸಂಘಕ್ಕೆ ಒಂದು ರೂಪಾಯಿ ಮೇಲ್ಪಟ್ಟು ವಂತಿಗೆ ಕೊಟ್ಟ ಪ್ರತಿಯೊಬ್ಬ ಮಹನೀಯರಿಗೂ ವಿಂಟಿಂಗಿನಲ್ಲಿ ಮೂತನಾಡಲು ಮತ್ತು ಓಟು ಕೊಡಲಿಕ್ಕೆ ಹಕ್ಕು ಇರುತ್ತದೆ. ಸಂಘಕ್ಕೆ ಸಂಬಂಧಪಟ್ಟ ಎಲ್ಲಾ ಪ್ರಶ್ನೆಗಳನ್ನು ಸಿ. ಹೆಚ್. ಜಿ. ಕಾಳೇಗೌಡರು ಪ್ರೆಸಿಡೆಂಟರು ಶನಿವಾರಸಂತೆ ಇವರಿಗೆ ತಾ. 10—4—36ರ ವಳಗೆ ತಲಪುವಂತೆ ಕಳುಹಿಸಿಕೊಡಬೇಕಾಗಿ ಕೇಳಿಕೊಳ್ಳೋಣವಾಗಿದೆ. ಸದರಿ ದಿವಸ ವಿಂಟಿಂಗಿಗೆ ಬರುವ ಎಲ್ಲಾ ಮಹನೀಯರುಗಳಿಗೆ ಊಟದ ವ್ಯವಸ್ಥೆಯು ಸಹ ಮೂಡಲ್ಪಡುತ್ತೆ.

ಶನಿವಾರಸಂತೆ, ತಾ. 26—3—36.

ಸಿ. ಹೆಚ್. ಜಿ. ಕಾಳೇಗೌಡ,
ಪ್ರೆಸಿಡೆಂಟ್, ವೀರಶೈವ ವಿದ್ಯಾಭಿವೃದ್ಧಿ ಸಂಘ.

2—1

ಡಾಕ್ಟರ್ ಮೇತ್ಯುಸ್ ಎಬ್ರಹಾಮ್.
ದಂತ ವೈದ್ಯರು.
ಗೀತಾಂಜಲಿ ಬಂಗ್ಲೆ.
(ಪೋಸ್ಟಾಫೀಸು ಎದುರುಗಡೆ.)

ಸಕಲ ಹಲ್ಲು ನೋವುಗಳನ್ನು ಶೀಘ್ರವಾಗಿ ಗುಣಪಡಿಸುವರಲ್ಲದೆ, ಸುಂದರವಾದ ಕೃತ್ರಿಮ ಹಲ್ಲುಗಳನ್ನು ಮನ ಒಪ್ಪುವಂತೆ ಕಟ್ಟುವರು. ಒಮ್ಮೆ ಪರೀಕ್ಷಿಸಿದಲ್ಲಿ ತಿಳಿಯುವುದು. [52—24]

ಅನೇಕ ವರ್ಷಗಳಿಂದ ಅನುಭವಪಟು ಪ್ರಖ್ಯಾತಿ ಹೊಂದಿದ

ಕರ್ಕಕಂಪನಿ ೧೨೫೩

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥೆ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟಿ. ಖ. ೭ ಆಣೆ. ಜರೂರು ತರಿಸಿಕೊಳ್ಳಿ.

ಗಣೇಶ ರಾಮಚಂದ್ರ ಕರ್ಕೆ,
(25—27) **ಮತ್ತು ಕಂಪೆನಿ,**
ಗಿರಗಾಂವ, ಮುಂಬಯಿ,

SHIROMANI NARAYANACHARYA
Choukhamba Benares City.

ಶಾಸ್ತ್ರಗಳೇ, ಪೂರ್ವಿಕರು ಆರೋಗ್ಯರೇ ಅಥವ ಈಗಿನವರೇ? ರಾಮಣ್ಣಯ್ಯನವರೇ, ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ. ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆಮಾಡುತ್ತ ಇದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿಸಂಪತ್ತು, ಕೀರ್ತಿ ಇವುಗಳೆಲ್ಲಾ ಆಗುವುದಾಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣೀ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷೀ ದೊರೆಯುವುದು,

ಸಣ್ಣ ಅಡ್ಡೆ ಪ್ರವಾಣದ ಕಂಠಿಸರ 1ಕ್ಕೆ ಆಣೆ 1 ರಿಂದ ರೂ. 25ರ ವರೆಗೆ. 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಆಣೆ 3ರಿಂದ ರೂ. 25ರ ವರೆಗೆ. ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ. 3ರಿಂದ ರೂ. 50ರ ವರೆಗೆ. ಮತ್ತು 3—4—5—6—7—8 ಮುಖಗಳ ಕಾಳು 1ಕ್ಕೆ ಆಣೆ 4 ರಿಂದ ರೂ. 10. ಮತ್ತು 9—10—11 ಮುಖಗಳುಳ್ಳ ಕಾಳು 1ಕ್ಕೆ ರೂ. 1ರಿಂದ 30ರ ವರೆಗೆ. 12—13—14 ಮುಖದ ಕಾಳು 1ಕ್ಕೆ ರೂ 4ರಿಂದ 100ರ ವರೆಗೆ. ಸಣ್ಣ ರುದ್ರಾಕ್ಷೀ ಅವರೆ ಕಾಳಿಗಿಂತ ಸಣ್ಣದಾಗುತ್ತ ಕ್ರಯ ಜಾಸ್ತಿ. ದೊಡ್ಡ ರುದ್ರಾಕ್ಷೀ ಅಡಕೆಗಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವುದು. (ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟಾಂಪು ಕಳುಹಿಸಿದರೆ 3 ಇನಾಮುಗಳು—1 ವಿಶ್ವೇಶ್ವರ ಪಟ, 1 ಕಾಶೀ ನಕ್ಷೆ, 1 ಕಾಶಿ ಪಿತ್ರಂಬರ ಕೆಟಲಾಗಿನೊಡನೆ 3 ಇನಾಮುಗಳು.)

ಶಿರೋಮಣಿ ನಾರಾಯಣಾಚಾರ್ಯರ್,
52—32 **ಚೌಖಂಬಾ ಬೆನಾರಿಸ್, (ಕಾಶೀ)**

ಮೂರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮವಾಗಿ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರಾರು ಫಾರಮುಗಳೂ, ಜಪ್ತಿ ಮಂಜೂರಾತಿ ಫಾರಮುಗಳೂ, ಕುಟುಂಬಸ್ತರ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ,—ಸೆಕ್ಯೂರ್ ಕೀಪರ್ ಖರಾರು ಫಾರಮುಗಳೂ ಶಿವಜರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ರಿಜಸ್ಟರ್ ಪುಸ್ತಕಗಳೂ, ಮತ್ತು ಚೆಕ್ ಪುಸ್ತಕಗಳೂ ನಮ್ಮ ವಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಮುದ್ದು ಬರಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು

ಮೇನೇಜರ್
"ಕೊಡಗು, ಲಿಮಿಟೆಡ್,
ಮಡಿಕೇರಿ.

ಗುಂಡು ಹೊಡೆಯುವ ಕ್ರಮಗಳು.
ಉಪಯುಕ್ತ ಸೂಚನೆಗಳು.

ಶಿಕಾರಿಗಳಿಗೆ:—
ನಮ್ಮ ಕೋವಿ ಮತ್ತು ತೋಟಾಗಳು ಶಿಕ್ಷಕ (Our arms and ammunition GUIDE 3) ಇದರಲ್ಲಿ ಗುಂಡು ಹೊಡೆಯುವ ನೂತನ ವಿಧಾನಗಳ ವಿಷಯ ಅತಿ ಉಪಯುಕ್ತ ಸೂಚನೆಗಳಿವೆ.

Goolamhusain Allibhoy & Sons, Ltd.,
26—27 210, Abdulrehman Street, BOMBAY 3.

ಸನ್ 1882ನೇ ಇಸವಿ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟು ಸರಕಾರದ ಭರವಸೆಯುಳ್ಳ

ದಿ ಬೋಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಅಧ್ಯಕ್ಷರು—ಮಾನನೀಯ ಸರ್ ಲಲ್ಲೂಭಾಯಿ ಸಾಮಲದಾಸ್,
ಕೆ. ಟಿ. ಸಿ. ಐ. ಇ., ಜೆ. ಪಿ. ಯವರು.

ಕೊಚ್ಚಿಕಾರ್ ಬ್ರುದರ್ಸ್ ಮದ್ರಾಸು ಬ್ರಾಂಚ್ ಸೆಕ್ರೆಟರಿಗಳು.

ಕಳೆದ ಲಾಭ ಹಂಚುವಿಕೆಯಲ್ಲು ರೂ. 18ರಿಂದ 23ರ ವರೆಗೆ ಬೋನಸು ಡಿಕ್ಲೇರಾಗಿರುತ್ತೆ.

ಹಿಂದಿಯರಿಂದ ಸ್ಥಾಪಿಸಲ್ಪಟ್ಟು ಹಿಂದೂದೇಶದವರಿಗಾಗಿ ಜೀವವಿಮೆಗೆ ಸಮ್ಮಂದಪಟ್ಟಿರುವ ಅತ್ಯುತ್ತಮ ತರದ ಲಕ್ಷಣಗಳಿಂದ ಕೂಡಿ ಕಮ್ಮಿ ಪ್ರೀಮಿಯಮ್ ದರದಲ್ಲಿ ಪಾಲಿಸಿ ಕೊಡುವ ಕಂಪೆನಿ ಇದೆಂದು ಮನವೊರ್ತಿ ನಂಬಿರಿ.
ಪತಿ ವತ್ನಿಯರು ಮತ್ತು ವ್ಯಾಪಾರಸ್ಥರು ವಗೈರೆಯರಿಗೆ ಏಕೀಭವಿಸಿ (ಜಾಯಿಂಟ್ ಲೈಫ್)
ಪಾಲಿಸಿ ಕಮ್ಮಿ ಪ್ರೀಮಿಯಮ್ ದರದಲ್ಲು ಕೊಡುವ ಈ ಕಂಪೆನಿಯು ಹೆಸರುಗೊಂಡಿದೆ.
ಪಾಲಿಸಿದಾರರು ಅಕಾಸ್ಮಾತ್ತಾಗಿ ಅಂಗಹೀನರಾದರೆ ಅಂಥವರಿಗೆ ಪಾಲಿಸಿಯ ಮೊಬಲಗನ್ನು ಮುಂದಳ
ಪ್ರೀಮಿಯಮ್ ವಸೂಲಾತಿ ಇಲ್ಲದೆ ಪೆನ್ಷನ್ ರೀತಿಯಲ್ಲು ಉದಾರತ್ವದಿಂದ ಕೊಡಲು
ಈ ಕಂಪೆನಿಯು ಎದುರು ನಿಂತಿದೆ ಎಂದು ನೆನಪಿರಲಿ.
ಮುತುವರ್ಜಿಯಿಂದ ಕೆಲಸ ಮಾಡಲು ಇಚ್ಛಿಸುವ ಗಂಡಸರು ಮತ್ತು ಹೆಂಗಸರಿಗೆ
ಉತ್ತಮ ತರಹದ ಕಮಿಶನ್ ವಗೈರೆಯಿಂದ ಏಜೆನ್ಸಿ ಕೊಡಲಾಗುತ್ತೆ.

ಹೆಚ್ಚಿನ ಮಾಹಿತಿಗೆ—**ಬಿ. ಎಸ್. ಐಯ್ಯಪ್ಪು,**
ಕೊಡಗು ಚೀಫ್ ಏಜೆಂಟ್,
26— 7 ಮಹದೇವಪೇಟೆ, ಮಡಿಕೇರಿ.

ಎರಡು ಕೆಲಸಕ್ಕೊಂದೇ ಸಾಬೂನು

"ಮೈಸೂರು ಗಂಧದ ಸಾಬೂನು."

ಈ ಸಾಬೂನು ನಾಜೂಕಾದ ಚರ್ಮವನ್ನು ಶುಭ್ರಗೊಳಿಸುವುದು ಮಾತ್ರವಲ್ಲ; ಸಂದರ್ಶಣೆಯನ್ನೂ ಮೂಡುಕ್ಕದೆ, ಯಾರು ಯಾರು ತಮ್ಮ ಆರೋಗ್ಯದ ಕಡೆ ಗಮನವಿಡುವರೋ ಯಾರು ಯಾರು ತಮ್ಮ ಚರ್ಮವನ್ನು ಎಚ್ಚರಿಕೆಯಿಂದ ನೋಡುವರೋ ಅವರೆಲ್ಲರೂ ಉಪಯೋಗಿಸುವುದು

ಮೈಸೂರು ಗಂಧದ ಸಾಬೂನು.

ಎಲ್ಲಾ ಅಂಗಡಿಗಳಲ್ಲೂ ಸಿಕ್ಕುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ.

52—6 **ಬೆಂಗಳೂರು.**

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಕೋ-ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50,000— 0—0
ವಸೂಲಾದ ಶೇರ್ ಮೊಬಲಗು	—	37,180— 0—0
ಜಮೂಬಂದ ಠೇವಣಾತಿ	—	25,9035—8—10
ವಸೂಲಾದ ಕ್ಷೇಮನಿಧಿ	—	1,03851— 4—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 4-8-0ರ ದರದಲ್ಲಿಯೂ ಒಂದು ವರ್ಷದ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ದರದಲ್ಲಿಯೂ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಳಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟರು,
ಪಂದ್ಯಂಡ ಐ. ಬೆಳ್ಯಪ್ಪನವರು.

ಮ್ಯಾನೇಜರ್
ರಾ. ಸಾ. ಪಾಂಡಂಡ ಚಂಗಪ್ಪನವರು,

ಸೆಕ್ರೆಟರಿ
ಮನೆಯಪ್ಪಂಡ ಬೆಳ್ಯಪ್ಪನವರು.

ಕಾರ್ತೀಕ 1—2—1936.

ಭಾರತದ ಮುಂದಿನ ಜನಾಂಗದ ಆರೋಗ್ಯ ಮತ್ತು ಕ್ಷೇಮ ವರ್ಧನೆಯು ಇಂದಿನ ಅನೇಕ ರಾಜಕೀಯ ಮತ್ತು ಸಾಮಾಜಿಕ ಮುಂದಾಳುಗಳ ದೃಷ್ಟಿಯಲ್ಲಿರುವ ಒಂದು ದೊಡ್ಡ ಸಮಸ್ಯೆಯಾಗಿರುತ್ತದೆ. ತಮ್ಮ ಮಕ್ಕಳ ದೇಹವು ಪುಷ್ಟಿಯೂಗಿಯೂ ಸುದೃಢವಾಗಿಯೂ ಇರಲಿಕ್ಕೆ ಬೇಕಾದ ಒಂದು ಅಪೂರ್ವವಾದ ಸಂಜೀವಿನಿಯನ್ನು ಎಲ್ಲರೂ ತಿಳಿದದ್ದಾಗಿದ್ದರೆ ಈ ವಿಚಾರವು ಇಷ್ಟು ಕಠಿಣತರದ್ದಾಗಿರುತ್ತಿದ್ದಿಲ್ಲ. ಈ ಸಂಜೀವಿನಿಯಂತಿರುವ ಔಷಧವನ್ನು ಹೆಚ್ಚು ಸಫಲತೆಯಿಂದ ಅನೇಕರು ಭಾರತದ ಉದ್ದಗಲಕ್ಕೂ ಕಳೆದ 50 ವರ್ಷಗಳಿಂದ ಉಪಯೋಗಿಸುತ್ತಲಿರುವರು ಮಗುವು ಹೆಚ್ಚು ಕೃಶವಾಗಿ, ನಿರ್ಬಲತೆಯಿಂದ ಕೂಡಿ ಹಾಲನ್ನು ಸಹ ಜೀರ್ಣಿಸಿಕೊಳ್ಳಲಶಕ್ತವಾಗಿ, ಆಗಿಂದಾಗ್ಯೆ ಶೀತ, ಕೆಮ್ಮು ಮೊದಲಾದ ರೋಗಗಳಿಗೀಡಾಗಿರುದಾದರೆ ಒಡನೆ ಪ್ರಸಿದ್ಧಿ ಹೊಂದಿರುವ

ಡೋಂಗರೆ ಬಾಲಾಮೃತವನ್ನು

ಕೊಡಬೇಕು. ಡೋಂಗರೆ ಬಾಲಮೃತವು ಒಂದು ಟಾನಿಕ್. ಎಲ್ಲೆಡೆಗಳಲ್ಲೂ ದೊರೆಯುವುದು.

ಪ್ರೊಪ್ರಾಯಿಟರ್ಸ್—
ಕೆ. ಟಿ. ಡೋಂಗರೆ ಕಂಪೆನಿ,
(52—6) ಗಿರಿಗಾಂವ್, ಬೊಂಬಾಯಿ.

EMPIRE OF INDIA LIFE ASSURANCE CO., LTD.

ESTD. 1897.

TEN YEARS' PROGRESS.

	1925 Rs.		1935 Rs.
Income	45,50,127	....	73,28,467
New Assurances	78,07,000	....	1,47,57,880
Total Assets	2,46,08,120	....	4,50,03,372
Assurances in force	6,95,93,793	....	11,56,12,828

Form of proposal and other particulars will be sent on Application.

Head office:—
Empire of India Life Building,
BOMBAY.

52—20

Branch Office:—
152/3—Commercial Street,
BANGALORE.

ಪಂಡಿತ ಜವಾಹೀರಲಾಲ್ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕವನ್ನು ಪಡೆದ,

ಒಂದೇ ಸಮನಾಗಿ ಮೂವತ್ತೈದು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ ತಾಜಾ ಮತ್ತು ಪೌಷ್ಟಿಕ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಮೆಡಲುಗಳನ್ನು ಪಡೆದು ಪರದೇಶದಲ್ಲಿ ಧಾರಾಳವಾಗಿ ಖರ್ಚಾಗುವ

ಶಕ್ತಿವರ್ಧಕ ಉತ್ತಮ ತರಗತಿಯ ಟಾನಿಕ್

ದ್ರಾಕ್ಷಾಮೃತ

ಈ ವನಸ್ಪತಿ ರಸಾರ್ಕಗಳಿಂದ ಶಾಸ್ತ್ರೋಕ್ತವಾಗಿ ಸ್ವದೇಶೀ ಯಂತ್ರೋಪಕರಣಗಳಿಂದ ತಯಾರಿಸಿದ ಮಧುರಾಮೃತ.

ಇದರ ಸೇವನೆಯಿಂದ ಉಷ್ಣ (ಗರಮಿ), ಧಾತುಸ್ರಾವ, ಸ್ವಪ್ನಾವಸ್ಥೆ, ಕೈಕಾಲು, ಕಣ್ಣೊಳಗೆ ಉರಿ, ಮಲಬದ್ಧತೆ ಮುಂತಾದವು ಗುಣವಾಗುವದಲ್ಲದೆ ಜೀರ್ಣಶಕ್ತಿಯು ಹೆಚ್ಚಿ ದೇಹದಾರ್ಢ್ಯವುಂಟಾಗುವುದು. ಇದರಿಂದ ನಪುಂಸಕತ್ವವಿದ್ದಲ್ಲಿ ಅದು ಹೋಗಿ ವೀರ್ಯ ವೃದ್ಧಿಯಾಗುವದು. ಹೆಂಗಸರಿಗೂ, ಗಂಡಸರಿಗೂ ಇದು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣ (ಗರಮಿ) ರೋಗಗಳಿದ್ದರೆ ಅವೆಲ್ಲವೂ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧದ 3 ಬಾಟ್ಲಿಗಳ ಸೇವನೆಯಿಂದ ಪೂರ್ಣ ಗುಣ ಆಗುತ್ತದೆ. 1 ಬಾಟ್ಲಿಯನ್ನು ಸೇವಿಸುವದರಲ್ಲೇ ಇದರ ಗುಣ ಕಂಡು ಬರುವದು. ಪ್ರಮಾಣ:—ಬೆಳಗಿನಲ್ಲಿ ಒಂದು ತೊಲೆ ಮತ್ತು ಸಂಜೆಗೆ ಒಂದು ತೊಲೆ ತಕ್ಕೊಳ್ಳಬೇಕು.

ಬೆಲೆ—1 ಬಾಟ್ಲಿಗೆ ರೂ. 1—4-0, 3 ಬಾಟ್ಲಿಗೆ ರೂ. 3—8—0, 1 ಡಜನ್ ಬಾಟ್ಲಿಗಳಿಗೆ ರೂ. 12—0—0;

ಮ್ಯಾನೇಜರ್:—ದ್ರಾಕ್ಷಾವೃತ ಡಿಪೊ ವೋರ್ಸ್ ನಿಪ್ಪಾಣಿ ಜಿಲ್ಲಾ (ಬೆಳಗಾವಿ.)

52—31 ಕೊಡಗಿನ ಏಜಂಟರು—ನಾವೆಲ್ಟಿ ಸ್ಟೋರ್ಸ್, ಮಡಿಕೇರಿ
ಬಿ ಪುಟ್ಟಯ್ಯ ಶೆಟ್ಟಿ & ಸನ್ಸ್, ಸೋಮವಾರಪೇಟೆ.
ಭಕ್ತಾ ಬ್ರದರ್ಸ್, ಕಾಸರಗೋಡು.] ಎ. ಎನ್. ಹುಚ್ಚಯ್ಯ, ಮರ್ಚೆಂಟ್, ಗೋಣಿಕೊಪ್ಪಲು.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಜೀವ ವಿಮೆ ಕಂಪೆನಿ ಲಿಮಿಟೆಡ್.

(1874ನೇ ಇಸವಿಯಲ್ಲಿ ಇಂಡಿಯಾದಲ್ಲಿ ಸ್ಥಾಪನೆಯಾದದ್ದು) (ಹೆಡ್ ಆಫೀಸು—ಬೊಂಬಾಯಿ.

1934ನೇ ಇಸವಿಯ ಕಂಪೆನಿಯ ಕೆಲಸದ ಫಲಿತಾಂಶ—

ಹೊಸ ಪಾಲಿಸಿಗಳ ಪ್ರೀಮಿಯಂ		ರೂ.	7,62,42,761
ವಾರ್ಷಿಕ ಉತ್ಪತ್ತಿ		ರೂ.	3,14,01,970
ಚಾಲ್ತಿಯಲ್ಲಿರುವ ಒಟ್ಟು ಪಾಲಿಸಿಗಳು		ರೂ.	54,20,38,518
ಕ್ಲೇಯಿಮ್ಸ್‌ಗಳಿಗೆ ಕೊಟ್ಟ ಒಟ್ಟು ಹಣ		ರೂ.	16,29,88,814
ಫಂಡ್ಸ್ ಹೆಚ್ಚಿದ್ದು		ರೂ.	15,53,88,843

ಈ ಮೇಲಿನ ಫಲಿತಾಂಶಗಳು 'ಓರಿಯಂಟಲ್' ಕಂಪೆನಿಯ ಸುಸಂಘಟನೆಯನ್ನೂ ಮತ್ತು ಪ್ರಸಿದ್ಧಿಯನ್ನೂ ವಿಷದಗೊಳಿಸುತ್ತವೆ.

ಈ ಪ್ರಸಿದ್ಧಿಗೊಂಡಿರುವ ಮತ್ತು ಅಭಿವೃದ್ಧಿಯಲ್ಲಿರುವ ಇಂಡಿಯನ್ ಜೀವ ವಿಮೆ ಕಂಪೆನಿಯಲ್ಲಿ ನಮೆ ಇಳಿಸಲು ಸ್ಥಾವಕಾಶ ಮಾಡಬೇಡಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಮೇನೇಜರ್, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಲಿಕೋಟೆ	ಕರಾಚಿ	ಮೊಂಬಾಸ	ರಂಗೂನು
ಅಹ್ಮದಾಬಾದು	ಕಲ್ಕತ್ತಾ	ಕೊಲಾಲಂಪೂರು	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಕೊಲಂಬೊ	ಲಾಹೋರ್	ಪಾಟ್ನ	ಸಿಂಗಪುರ
ಅಲ್ಲಾಹಾಬಾದು	ಢಕ್ಕಾ	ಲಕ್ನೊ	ಪೂನ	ಸುಕ್ಕೂರು
ಅಂಬಾಲಾ	ಡೆಲ್ಲಿ	ಮದ್ರಾಸು	ರಾಯಿಪುರ	ತಿರುಚಿನಾಪಳ್ಳಿ
ಒಳ್ಳಾರಿ	ಗೌಹತಿ	ಮಂಡಲೆ	ರಾಜಶಾಹಿ	ತಿರುವೆಂಡ್ರಮ್
ಬರೇಲಿ	ಜಲಗಾಂ	ಮಡಿಕೇರಿ	ರಾಂಚಿ	ವಿಶಾಖಪಟ್ಣ
ಕೊಯಂಬುತ್ತೂರು	ಗುಂಟೂರು	ಜಲ್‌ಪೇಗುರಿ	ಜಬ್ಬಲ್‌ಪುರ	ಮಧುರೆ & ಮೈಸೂರು

ಓರಿಯಂಟಲ್ ಬಿಲ್ಡಿಂಗ್ಸ್,
ಸೌತ್ ಪೇರೇಡ್, ಬೆಂಗಳೂರು,

52—13

ಯಂ. ವಿ. ಮುತ್ತುಕೃಷ್ಣ ನಾಯುಡು,
(ಬ್ರಾಂಚ್ ಸೆಕ್ರೆಟರಿ.)

Printed & published by P I Belliappa at 'Kodagu' Press, Mercara for "Kodagu" Ltd.